॥ ಶ್ರೀಃ ॥

॥ ಶ್ರೀಮತೇ ರಾಮಾನುಜಾಯ ನಮಃ ॥

# ರಾಮಾನುಜ ರಹಸ್ಯತ್ರಯ ಸೂತ್ರಗ್ರಂಥ




ಸಂಪಾದಕರು

ಶ್ರೀ. ಉ. ವೇ. ವಿದ್ವಾನ್ ಅರ್ಕೈಯರ್ ಶ್ರೀರಾಮಶರ್ಮ



ಪ್ರಕಾಶಕರು :

ಶ್ರೀ ವೈಷ್ಣವ ಶ್ರೀ

ನಂ 7, 6 ಎ ಮೈನ್ ರೋಡ್, ಮಾರುತಿ ಎಕ್ಸ್‌ಟೆನ್‌ಷನ್

ಬೆಂಗಳೂರು 560 021. ದೂರವಾಣಿ : 2332 0572



ಶ್ರೀಃ
ಶ್ರೀಮತೇ ರಾಮಾನುಜಾಯ ನಮಃ

# ಶ್ರೀರಾಮಾನುಜ ರಹಸ್ಯತ್ರಯ ಸೂತ್ರಗ್ರಂಥ


ಸಂಪಾದಕರು

**ಶ್ರೀ ಉ.ವೇ. ವಿದ್ವಾನ್ ಅರೆಯರ್ ಶ್ರೀರಾಮಶರ್ಮ**

ಕನ್ನಡಾನುವಾದ

**ಶ್ರೀಮತಿ ರಮಾಶ್ರೀನಿವಾಸನ್ BSc. M.A. (Kan) M.A. (San)**



**ಆರ್ಥಿಕ ನೆರವು**

**ಎಂ. ಎ. ಸೀತಾ**

**ರಾಜಾಜಿನಗರ**

**ಬೆಂಗಳೂರು – 560 021**

**ಪ್ರಕಾಶಕರು :**

**ಶ್ರೀವೈಷ್ಣವಶ್ರೀ**

ನಂ. 7, 6 –ಎ ಮೈನ್ ರೋಡ್, ಮಾರುತಿ ಎಕ್ಸ್‌ಟೆನ್‌ಷನ್

ಬೆಂಗಳೂರು – 560 021. ದೂರವಾಣಿ : 23320572

**RAMANUJA RAHASTRAYA SUTRA GRANTHA** – Edited by Aryar Srirama Sharma with Kannada Translation by Smt. Ramasrinivasan. Published by **'SRIVAISHNAVASRI'** 6th 'A' Main Road, Maruthi Extension, Bangalore 560 021.

Pages: vi + 50

First Edition – 2004

No of copies : 1000

Price : Rs. 50/-

Copyright : Aryayar Srirama Sharma

© 2004

Print:
**Cosmic Creations**
464, 2nd Floor, 6th Main
2nd Stage, Rajajinagar, 17th Cross,
Malleswaram West, Bangalore 560 055.
Phone: 2357 4688, Mobile: 98451 83071

ಶ್ರೀಃ
ಶ್ರೀಮತೇ ರಾಮಾನುಜಾಯ ನಮಃ

# ಕೃತಜ್ಞತೆ

ಅಗಣಿತಗುಣಗಣಭೂಷಿತನಾದ ಪರಮಾತ್ಮನನ್ನು ಹೊಂದಲು ಇರುವ ಅನುಪಮ ಮಾರ್ಗ 'ಆಚಾರ್ಯಾಭಿಮಾನ'. ಸದ್ಗುರುವಿನ ಕೃಪೆಗೆ ಪಾತ್ರರದವರಿಗೆ ಭಗವಂತ ತಾನಾಗಿ ಲಭಿಸುತ್ತಾನೆ ಎಂಬುದು ಆರ್ಯೋಕ್ತಿ. ಹೀಗೆ ಸದ್ಗುರುವಾಗಿ ಜಗತ್ತಿನಲ್ಲಿ ಅವತರಿಸಿ ಬದ್ಧಜೀವರುಗಳ ಸಂಸಾರತರಣಕ್ಕೆ ಕಾರಣರಾದ ಮಹಾಚಾರ್ಯ ಭಗವದ್ರಾಮಾನುಜಾಚಾರ್ಯರ ವಿಷಯಿಕವಾದ ತಿರುಮಂತ್ರ, ದ್ವಯ, ಚರಮಶ್ಲೋಕಗಳ ಸೂತ್ರರೂಪ ವಿವರಣೆಯೇ **'ಶ್ರೀರಾಮಾನುಜ ರಹಸ್ಯತ್ರಯ ಸೂತ್ರಗ್ರಂಥ'**. ತಾಳಪತ್ರಗಳಲ್ಲಿ ಗ್ರಂಥಲಿಪಿಯಲ್ಲಿ ಅಡಗಿದ್ದ ಈ ದಿವ್ಯಗ್ರಂಥವನ್ನು ಒಂದು ವರ್ಷದ ಹಿಂದೆ, ಒಂದು ಅಪೂರ್ವ ರಾತ್ರಿಯಲ್ಲಿ ಬೆಳಗಿನಝಾವದವರೆಗೆ ಕಾಲಕ್ಷೇಪ ಕೇಳುವ ಭಾಗ್ಯ ಒದಗಿತು. ಈ ಕಾಲಕ್ಷೇಪ ಅನುಗ್ರಹಿಸಿದ ಮಹಾನುಭಾವರೇ ತಿರುನಾರಾಯಣಪುರಂ ಶ್ರೀ ಉ. ವೇ. ವಿದ್ವಾನ್ ಅರೆಯರ್ ಶ್ರೀರಾಮಶರ್ಮ. ನಡೆದಾಡುವ ವಿಶ್ವಕೋಶದಂತಿರುವ ಈ ಪ್ರಕಾಂಡಪಂಡಿತರಿಂದ ಈ ಅಪೂರ್ವ ಗ್ರಂಥವು ತಾನೂ ಬೆಳಕನ್ನು ಕಂಡು ನಮಗೂ ಬೆಳಕನ್ನು ತಂದಿತು. ಈವರೆಗೂ ಯಾವ ಭಾರತೀಯ ಭಾಷೆಯ ಅಡಿಯಲ್ಲೂ ಪ್ರಕಟವಾಗದ ಈ ಮಣಿಪ್ರವಾಳ ಸೂತ್ರ ಗ್ರಂಥವನ್ನು ಚೇತನರ ಉಜ್ಜೀವನಾರ್ಥವಾಗಿ ಕನ್ನಡ ಲಿಪಿಯಲ್ಲಿ, ಸೂತ್ರಗಳ ಕನ್ನಡ ಅನುವಾದದೊಡನೆ ಪ್ರಪ್ರಥಮ ಬಾರಿಗೆ ಪ್ರಕಾಶಪಡಿಸುವ ಸಂಕಲ್ಪ ಉಂಟಾಯಿತು. ಅದಕ್ಕೆ ಬೇಕಾದ ಅರ್ಥಿಕ ನೆರವಿನ ಚಿಂತೆಯಲ್ಲಿ ಮುಳುಗಿದ್ದಾಗ ಆಚಾರ್ಯರ ಅನುಗ್ರಹಕ್ಕೆ ಪಾತ್ರರಾದ ಭಕ್ತಾಗ್ರಣಿ **'ಎಂ.ಎ. ಸೀತಾ'** ರಾಜಾಜಿನಗರ, ಇವರು ಭಕ್ತಿಪುರಸ್ಸರವಾಗಿ ಈ

ಕೈಂಕರ್ಯವನ್ನು ನೆರವೇರಿಸಲು ಮುಂದಾದರು. 12,000 ರೂಗಳನ್ನು ಉದಾರವಾಗಿ ನೀಡಿ ಈ ಗ್ರಂಥ ಪ್ರಕಾಶಗೊಳ್ಳಲು ನೆರವಾದರು. ಈ ಸೂತ್ರಗಳಿಗೆ ಇನ್ನು ವಿಸ್ತಾರವಾದ ವ್ಯಾಖ್ಯಾನವನ್ನು ರಚಿಸಿ ಅದರೊಡನೆ ಪ್ರಕಟಿಸಬೇಕೆಂಬ ಇಚ್ಛೆಯನ್ನು ಶ್ರೀಮತಿ ಎಂ. ಎ. ಸೀತಾರವರು ವ್ಯಕ್ತಪಡಿಸಿದರು. ಆದರೆ ತತ್ಕಾಲದಲ್ಲಿ ವ್ಯಾಖ್ಯಾನ ರಚನೆ ಸಾಧ್ಯವಾಗದ್ದರಿಂದಲೂ, ಇನ್ನೂ ಹಲವು ಸಂಶೋಧನೆಗಳ ನಂತರ ವ್ಯಾಖ್ಯಾನ ರಚಿಸುವುದು ಸೂಕ್ತವೆಂದೂ ಭಾವಿಸಿ ಈಗ ಮೂಲಸೂತ್ರಗಳನ್ನು ಅದರ ಕನ್ನಡಾನುವಾದವನ್ನು ಮಾತ್ರ ಪ್ರಕಟಗೊಳಿಸಲಾಗಿದೆ. ಪ್ರಥಮ ಬಾರಿಗೆ ವಾಚಕವೃಂದಕ್ಕೆ ಪರಿಚಯಿಸಲ್ಪಡುತ್ತಿರುವ ಈ ಸೂತ್ರಗಳ ಬಗ್ಗೆ ತಮ್ಮ ಅಭಿಪ್ರಾಯ, ಅರ್ಥವಿಶೇಷಗಳನ್ನು ಸಹೃದಯರು ನಮಗೆ ಬರೆದು ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ. ಜೀರ್ಣವಾಗಿದ್ದ ತಾಳಪತ್ರದಿಂದ ಇದನ್ನು ಉದ್ಧರಿಸಿ ಸುಂದರ ಕನ್ನಡ ಲಿಪಿಯಲ್ಲಿ ಬರೆದು, ಅತ್ಯಂತ ಉತ್ಕೃಷ್ಟವೂ ಉಪಯುಕ್ತವೂ ಆದ ಮುನ್ನುಡಿಯನ್ನು ರಚಿಸಿಕೊಟ್ಟ ನನ್ನ ಗುರುಗಳಾದ ಶ್ರೀ ಉ. ವೇ. ವಿದ್ವಾನ್ ಶ್ರೀರಾಮಶರ್ಮರ ಪಾದಾರವಿಂದಗಳಲ್ಲಿ ನನ್ನ ಭಕ್ತಿಪೂರ್ವಕ ಪ್ರಣಾಮಗಳು. ಉಚಿತವಾಗಿ ತಾಳಪತ್ರಗಳನ್ನು ಸ್ಕ್ಯಾನ್ ಮಾಡಿ ಫೋಟೋ ಪ್ರತಿಗಳನ್ನು ನೀಡಿದ ಶ್ರೀ ಉ. ವೇ. ಆಯಿನರಸಿಂಹನ್‌ರವರಿಗೆ ನನ್ನ ಕೃತಜ್ಞತೆಗಳು. ಕಾಂಚಾಣವಿಲ್ಲದೆ ಕಾರ್ಯ ಸಿದ್ಧಿಯಿಲ್ಲದ್ದರಿಂದ ಉದಾರವಾಗಿ ಧನ ಸಹಾಯ ನೀಡಿ ಈ ಉನ್ನತ ಕಾರ್ಯಕ್ಕೆ ನೆರವಾದ ಶ್ರೀಮತಿ ಸೀತಾರವರಿಗೆ ಭಗವದ್ಭಾಗವತ ಆಚಾರ್ಯಾನುಗ್ರಹದಿಂದ ಸಕಲಮಂಗಳಗಳೂ ಉಂಟಾಗಲಿ ಎಂದು ಹಾರೈಸುತ್ತೇನೆ. ಸುಂದರವಾಗಿ ಮುದ್ರಿಸಿಕೊಟ್ಟ ಕಾಸ್ಮಿಕ್ ಪ್ರಿಂಟರ್ಸ್‌ರವರಿಗೂ, ನೆರವಾದ ಸಕಲರಿಗೂ ನಮ್ಮ ನಮನಗಳು.

ಅಡಿಯೇನ್ ರಾಮಾನುಜದಾಸೀ

**ರಮಾಶ್ರೀನಿವಾಸನ್**

# ಪರಿವಿಡಿ


1. ಕೃತಜ್ಞತೆ iii

2. ಮುನ್ನುಡಿ 1

3. ತಿರುಮಂತ್ರ ಪ್ರಕರಣ 19

4. ದ್ವಯ ಪ್ರಕರಣ 21

5. ಚರಮಶ್ಲೋಕ ಪ್ರಕರಣ 31

6. ಶ್ರೀರಾಮಾನುಜ ಚತುಶ್ಲೋಕೀ 48

ಶ್ರೀಃ
ಶ್ರೀಮತೇ ರಾಮಾನುಜಾಯ ನಮಃ



# ಶ್ರೀರಾಮಾನುಜ ರಹಸ್ಯತ್ರಯಂ

## ತಿರುಮಂತ್ರಮ್

ಓಂ ನಮೋ ರಾಮಾನುಜಾಯ

## ದ್ವಯಮ್

ಶ್ರೀಮದ್ರಾಮಾನುಜ ಚರಣೌ ಶರಣಂ ಪ್ರಪದ್ಯೇ
ಶ್ರೀಮತೇ ರಾಮಾನುಜಾಯ ನಮಃ

## ಚರಮ ಶ್ಲೋಕಮ್

ಸರ್ವಕರ್ಮಾಣಿ ಸಂತ್ಯಜ್ಯ ರಾಮಾನುಜ ಇತಿ ಸ್ಮರ ।
ವಿಭೂತಿಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥

# ಶ್ರೀರಾಮಾನುಜ 'ರಹಸ್ಯತ್ರಯ' – ಮುನ್ನುಡಿ

## 1. ಆಚಾರ್ಯಭಕ್ತಿಯ ಮಹಿಮೆ

**ಮಂತ್ರೇ ತದ್‌ದೇವತಾಯಾಂ ಚ ತಥಾ ಮಂತ್ರಪ್ರದೇ ಗುರೌ ।**

**ತ್ರಿಷು ಭಕ್ತಿಸ್ಸದಾ ಕಾರ್ಯಾ; ಸಾ ಹಿ ಸರ್ವಾರ್ಥಸಾಧನೀ ॥**

ಎಂಬ ಒಂದು ಶ್ಲೋಕವು ಸಂಪ್ರದಾಯಗಳಲ್ಲಿ ಬೆಳಗುತ್ತಿದೆ. ಇದನ್ನು ನಮ್ಮ ಪಿಳ್ಳೈಲೋಕಾಚಾರ್ಯರು ಸೂತ್ರವಾಗಿಸಿ ಅನುಗ್ರಹದಿಂದ ಹೇಳಿದ್ದಾರೆ – 'ಮಂತ್ರದಲ್ಲೂ ಮಂತ್ರದ ಒಳಗಿರುವ ವಸ್ತುವಾದ ದೇವತೆಯಲ್ಲೂ, ಮಂತ್ರೋಪದೇಶ ಮಾಡಿದ ಗುರುವಿನಲ್ಲೂ ಘನವಾದ ಪ್ರೀತಿಯನ್ನು ನಾವು ಇಟ್ಟರೆ ಎಲ್ಲ ಕಾರ್ಯಗಳೂ ಸಿದ್ಧಿಸುವುವು' ಎಂದು.

ಮಂತ್ರಭಕ್ತಿ, ದೈವಭಕ್ತಿ, ಗುರುಭಕ್ತಿ ಎಂಬ ಈ ಮೂರು ವಿಧವಾದ ಭಕ್ತಿಗಳಲ್ಲಿ ಗುರುಭಕ್ತಿಗೇ ಕೆಲವು ವಿಶೇಷಗಳಂಟು. ಇವುಗಳನ್ನು ಉಪನಿಷತ್ತು ಹೀಗೆ ತಿಳಿಸುತ್ತದೆ.

**'ಯಸ್ಯ ದೇವೇ ಪರಾ ಭಕ್ತಿಃ, ಯಥಾ ದೇವೇ ತಥಾ ಗುರೌ;**
**ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ।**
**ಪ್ರಕಾಶಂತೇ ಮಹಾತ್ಮನಃ ॥'**

ಇಲ್ಲಿ ಹೇಳಿರುವ ಗುರುಭಕ್ತಿಯು 'ಪರಾ ಭಕ್ತಿ'. ಪರಮಾತ್ಮನಲ್ಲಿ ಎಷ್ಟು ಹೆಚ್ಚುಭಕ್ತಿಯನ್ನು ಮಾಡುತ್ತೇವೆಯೋ ಅಷ್ಟೇ ಹೆಚ್ಚು ಭಕ್ತಿ ಗುರುವಿನಲ್ಲೂ ಸಮವಾಗಿ ಸಲ್ಲಬೇಕು ಎಂದೇ ಈ ಮಂತ್ರದ ಮೊದಲ ಭಾಗದ ಅರ್ಥ.

ಲೋಕದಲ್ಲಿ ನಮಗೆ ಕಾಣದ ಒಂದು ವಸ್ತು ಪರಮಾತ್ಮ. ಅವನ ಗುಣಗಳಂತೆ ದೋಷಗಳೂ ನಮಗೆ ತಿಳಿಯವು. ಹಿಂದಿನ ಹಿರಿಯರು ಹೇಳಿದ ಮಾತುಗಳನ್ನೇ ಮುಂದಿಟ್ಟು, ವೇದಗಳಲ್ಲೂ ಶಾಸ್ತ್ರಗಳಲ್ಲೂ ತಿಳಿಸಿರುವ ಒಂದು ಅಮೂಲ್ಯವಾದ ವಸ್ತು ಪರಮಾತ್ಮ ಎಂದು ನಾವು ನಂಬಿಕೆಯಿಂದಲೇ ಸ್ವೀಕರಿಸುತ್ತೇವೆ.

ನಮ್ಮಂತೆಯೇ ಗುರುವೂ ಒಬ್ಬ ಮನುಷ್ಯ. ಅವನನ್ನು ಪರಮಾತ್ಮನಂತೆ ಅಮೂಲ್ಯವಾದ ಅದ್ಭುತವಾದ ವಸ್ತುವೆಂದು ಭಾವಿಸಲು ನಮ್ಮ ಮನಸ್ಸಿಗೆ ಒಪ್ಪುವುದಿಲ್ಲ. ಹೀಗಾಗಲು ಕಾರಣ ನಮ್ಮ ಮನಸ್ಸಿನಲ್ಲೂ ಜ್ಞಾನದಲ್ಲೂ ಬಂದು ಸೇರುವ ಕೊಳೆ–ಪಾಪ. ನಮ್ಮಂತೆಯೇ ಗುರುವೂ ಬದುಕುತ್ತಿರುವುದರಿಂದ ಇವನನ್ನು

ದೇವತೆಯೆಂದೋ, ಭಗವಂತನೆಂದೋ ಹೇಗೆ ಭಾವಿಸಲು ಸಾಧ್ಯ? ಭಾವಿಸಿದರೂ ಕೂಡ ಅದು ಸತ್ಯವೆನಿಸುವುದಿಲ್ಲವಲ್ಲವೆ! ಹೀಗೆಲ್ಲಾ ಮನಸ್ಸು ಕಲಗಿ ಜ್ಞಾನದಲ್ಲಿ ಕಸ ಸೇರಿ 'ನಮಗೆ ಸರಿಸಮ ನಮ್ಮ ಗುರು' ಎಂದೇ ಭಾವಿಸಬೇಕಾಗಿ ಬರುವುದು.

ಇಂತಹ ಭಾವನೆಯನ್ನು ಶಾಸ್ತ್ರವು ಮಹಾಪಾಪವೆಂದು ಸ್ಪಷ್ಟವಾಗಿತಿಳಿಸುತ್ತದೆ.

**"ವಿಷ್ಣೋರರ್ಚಾವತಾರೇಷು ಲೋಹಭಾವಂ ಕರೋತಿ ಯಃ ।**
**ಯೋ ಗುರೌ ಮಾನುಷಂ ಭಾವಂ; ಉಭೌ ನರಕಪಾತಿನೌ ॥"**

ಭಗವಂತನ ಅರ್ಚಾವತಾರವೆನಿಸಿ ದೇವಸ್ಥಾನಗಳಲ್ಲೂ ಮನೆಗಳಲ್ಲೂ ಇರುವ ಅವನ ದಿವ್ಯವಾದ ವಿಗ್ರಹಗಳನ್ನು ಇದು ತಾಮ್ರದ್ದು, ಇದು ಹಿತ್ತಾಳೆಯದು, ಇದು ಬೆಳ್ಳಿಯದು, ಇದು ಚಿನ್ನದ್ದು, ಇದು ಕಲ್ಲಿನದು, ಇದು ಮರದ್ದು, ಮುಂತಾದ ರೀತಿ ಭಾವಿಸುವಂತೆ; ಆಚಾರ್ಯನಾದ ಗುರುವನ್ನು ನಮ್ಮಂತೆಯೇ ಇವನೊಬ್ಬ ಮನುಷ್ಯ ಎಂದು ಭಾವಿಸುವುದು, ಪಾಪ ಎನಿಸುತ್ತದೆ. ಈ ಪಾಪಕ್ಕೆ ನರಕವೇ ಫಲ.

ಈ ಮಾದರಿಂಯಾದ ಪಾಪಗಳನ್ನು ಋಷಿಗಳೂ ಆಚಾರ್ಯರೂ **'ಅಸಹ್ಯಾಪಚಾರ'** ಎಂದು ಹೇಳುವರು. ಅಸಹ್ಯ ಎಂದರೆ ಸಹಿಸಿಕೊಳ್ಳಲಾಗದ ಎಂದರ್ಥ. ಪಿಳ್ಳೆಲೋಕಾಚಾರ್ಯರು ಲೋಕದ ಜನರ ಮನಸ್ಸನ್ನರಿತು ಅವರ ಮನದೊಳಗೆ ಜ್ಞಾನದ ಮೂಲಕ ಪ್ರವೇಶಿಸಿ ಬುದ್ಧಿ ಕಲಿಸುವಂತಹ ಆಚಾರ್ಯರಾದುದರಿಂದ ಈ ಅಪಚಾರವನ್ನು **'ಮಾತೃಯೋನಿ ಪರೀಕ್ಷೈಯೋಡು ಒಕ್ಕುಂ'** ಎಂದು ಶಾಸ್ತ್ರದಲ್ಲೇ ಹೇಳಿರುವ ಒಂದು ಹೋಲಿಕೆಯನ್ನು ತೋರಿಸಿ ತಿಳಿಸಿರುವರು. ನಮ್ಮ ತಾಯಿಯ ಹೊಟ್ಟೆಯಿಂದ ನಾವು ಹುಟ್ಟಿದ ಜಾಗವನ್ನೇ ವಿಮರ್ಶಿಸಲು ಹೊರಟರೆ, ಈ ಕೆಲಸವು ಅದೆಷ್ಟು ಪಾಪದ ಕೆಲಸ ಎಂಬುದನ್ನು ಗೊಂಡಾರಣ್ಯದಲ್ಲಿ ಬಾಳುವ ಒರಟು ಜನರೂ ಕೂಡ ಇದು ಬಹಳತಪ್ಪೆಂದು ಅದನ್ನು ನಿಷೇಧಿಸಿದ್ದಾರೆ ಅಲ್ಲವೆ!

ಇಂತಹ **'ಅಸಹ್ಯಾಪಚಾರವು'** ನಮ್ಮಿಂದ ನಡೆಯಬಾರದು ಎಂದಾದರೆ, ನಾವು ಭಗವಂತನ ಅವತಾರಗಳಲ್ಲಿ **'ಆಚಾರ್ಯಾವತಾರ'** ಎಂಬುದನ್ನು ಆಗಮ-ಶಾಸ್ತ್ರಗಳಲ್ಲಿ ಕಾಣಿಸಿರುವಂತೆ ಸ್ವೀಕರಿಸಿ ಪ್ರೀತಿಯೆಂಬ ಭಕ್ತಿಯಿಂದ ಆಚಾರ್ಯನನ್ನು ದೇವರೆಂತಲೂ ದೇವರಿಗಿಂತ ಕೆಲವು ವಿಶೇಷಗಳನ್ನು ಉಳ್ಳವನೆಂತಲೂ ಅರಿಯಬೇಕು. ಈ ಹಿರಿಯ ಅರಿವಿಗೆ ಫಲವೂ ಹಿರಿಯದೇ ಆಗಿರುವುದು. ಇದನ್ನೇ ಉಪನಿಷತ್ತು ಹೇಳುತ್ತದೆ, ಎರಡನೆಯ ಭಾಗದಲ್ಲಿ: "ತಸ್ಯೈತೇ ........ ಮಹಾತ್ಮನಃ" ಎಂದು.

ಲೋಕದಲ್ಲಿ ಪರಮಶಿವನನ್ನೂ ಚತುರ್ಮುಖ ಬ್ರಹ್ಮನನ್ನೂ ಶ್ರಿಯಃಪತಿಯಾದ ನಾರಾಯಣನನ್ನೂ ಭಗವಂತನೆಂದು ಸ್ವೀಕರಿಸುವ ಹಲವಾರು ಜನ ಇದ್ದಾರಲ್ಲ! ಇವರೆಲ್ಲರೂ ತಮ್ಮ ತಮ್ಮ ಭಗವಂತನನ್ನೇ ಧ್ಯಾನ-ಪೂಜೆ-ತಪಸ್ಸು-ದಾನ-ಧರ್ಮ-ಮುಂತಾದವುಗಳಿಂದ ಆರಾಧಿಸಿ ಆ ಭಗವಂತನ ಕಣ್ಣೋಟ-ಕಟಾಕ್ಷಗಳಿಂದ ಪವಿತ್ರವಾದ ಅನುಗ್ರಹವನ್ನು ಪಡೆದು ಅದರಿಂದ ಒಳ್ಳೊಳ್ಳೆಯ ಫಲಗಳನ್ನು ಪಡೆಯುತ್ತಾರಲ್ಲವೆ! ಪರಮಶಿವನಿಗೆ ಮೂರು ಕಣ್ಣುಗಳ ನೋಟ, ಚತುರ್ಮುಖಬ್ರಹ್ಮನಿಗೆ ಎಂಟು ಕಣ್ಣುಗಳ ನೋಟ, ವಿಶ್ವರೂಪನಾದ ನಾರಾಯಣನಿಗೋ ಸಾವಿರಾರು ಕಣ್ಣುಗಳ ನೋಟ, ಹೀಗೆ ಈ ಕಟಾಕ್ಷಗಳಿಂದ ಏರ್ಪಡುವ ಫಲಗಳು ಎಷ್ಟೆಷ್ಟೋ. ಆದರೂ ಈ ಯಾವ ನೋಟಗಳಿಂದಲೂ ಏರ್ಪಡದಂತಹ ವಿಶೇಷ ಫಲಗಳು ಒಬ್ಬ ಆಚಾರ್ಯನ ಮನಸ್ಸಿನ ಒಂದು ಸಣ್ಣ ನೋಟದಿಂದಲೋ, ಅಥವಾ ಆವನ ಎರಡೇ ಕಣ್ಣುಗಳ ನೋಟದಿಂದಲೋ ಲಭಿಸುತ್ತವೆ ಎನ್ನುತ್ತಾರೆ ನಮ್ಮ ವೇದಾಂತ ದೇಶಿಕರು.

**"ಏಕಸ್ಯೈವ ಗುರೋರ್ ದೃಷ್ಟ್ಯಾ ದ್ವಾಭ್ಯಾಂ ವಾऽಪಿ ಲಭೇತ ಯತ್**
**ನ ತತ್ ತಿಸೃಭಿರಷ್ಟಾಭಿಃ ಸಹಸ್ರೇಣಾಪಿ ಕಸ್ಯಚಿತ್".**

(ಸುಭಾಷಿತನೀವೀ - ಸದಾಶ್ರಯ ಪದ್ಧತಿ, 10)

ಇಂತಹ ವಿಶೇಷ ಫಲಗಳಲ್ಲಿ ಒಂದು ಫಲವನ್ನು ಮಾತ್ರ ಮಾದರಿಗಾಗಿ ಇಲ್ಲಿ ಉಪನಿಷತ್ತು ತೋರಿಸಿಕೊಡುತ್ತದೆ. **"ಕಥಿತಾಃ ಹಿ ಅರ್ಥಾಃ ಪ್ರಕಾಶಂತೇ"** ಎಂದು.

ಭಗವದ್‌ಭಕ್ತಿಗೆ ಸಮವಾಗಿ ಆಚಾರ್ಯಭಕ್ತಿಯೂ ಇರುವವನಿಗೆ ಉಪನಿಷತ್ತುಗಳಲ್ಲಿ ಹೇಳಿರುವ ಗುರೂಪದೇಶವಾಗಿರುವ ಎಲ್ಲ ಅರ್ಥಗಳೂ ಜ್ಞಾನದಲ್ಲಿ ಚೆನ್ನಾಗಿ ಪ್ರಕಾಶಿಸುತ್ತವೆ ಎಂಬುದು ಇದರ ಮೊದಲನೆಯ ಸ್ತರದ ಅರ್ಥ.

ಆಚಾರ್ಯಭಕ್ತಿಯಲ್ಲಿ ಕೊರತೆ ಇದ್ದ ಕರ್ಣನಿಗೆ ಗುರುವಾದ ಪರಶುರಾಮದೇವರು ಉಪದೇಶಿಸಿದ ಅಸ್ತ್ರಮಂತ್ರಗಳೆಲ್ಲವೂ ಹೋರಾಡುವ ಸಮಯದಲ್ಲಿ ಮರತೇ ಹೋದುವಲ್ಲವೆ! ಒಂದು ಚೂರೂ ಕೊರತೆಯಿರದಂತಹ ಆಚಾರ್ಯಭಕ್ತಿಯುಳ್ಳ ಏಕಲವ್ಯನಿಗೆ, ಆಚಾರ್ಯರಾದ ದ್ರೋಣರು ನೇರವಾಗಿ ಉಪದೇಶಿಸದೇ ಹೋದರೂ; ಅಪೂರ್ವವಾದ ಅರ್ಥಗಳೆಲ್ಲವೂ ಚೆನ್ನಾಗಿ ಏಕಲವ್ಯನಿಗೆ ಜ್ಞಾನದಲ್ಲೂ, ಪ್ರಯೋಗದಲ್ಲೂ ದೃಢವಾಗಿ ಅಚ್ಚಳಿಯದಂತೆ ನಿಂತಿದ್ದವಲ್ಲವೆ!

ಈ ರೀತಿ ಗುರುಭಕ್ತಿಯಿರುವವನಿಗೆ ಒಂದು **'ಮಹಿಮೆ'** ಯುಂಟಾಗುತ್ತದೆ. ಈ ಮಹಿಮೆಯಿಂದ ಅವನಿಗೆ ಗುರು ಹೇಳಿಕೊಡದಿದ್ದ ವಿಷಯಗಳೂ, ಆಯಾ ಸಮಯಗಳಲ್ಲಿ ಪ್ರಕಾಶಿಸುತ್ತವೆ ಎಂಬುದು ಎರಡನೆಯ ಸ್ತರದ ಉಪನಿಷತ್‌ವಾಕ್ಯದ ಅಭಿಪ್ರಾಯ. ಆದುದರಿಂದ ಎರಡು ಬಾರಿ **''ಪ್ರಕಾಶಂತೇ ಮಹಾತ್ಮನಃ''** ಎಂಬ ವಚನ ಬಂದಿದೆ. ವಿಶೇಷವಾದ ಅಭಿಪ್ರಾಯಗಳಿದ್ದಾಗ ಒಂದೇ ಮಾತನ್ನು ಎರಡು ಬಾರಿ ಹೇಳುವುದರಲ್ಲಿ **'ಪುನರುಕ್ತಿ'** ಎಂಬ ದೋಷವಿರುವುದಿಲ್ಲ.

ಇಲ್ಲಿ ಗುರುವು ಹೇಳಿಕೊಟ್ಟ ಅರ್ಥಗಳಂತೆ ಹೇಳಿಕೊಡದಿದ್ದ ಅರ್ಥಗಳೂ ಕೂಡ ಹೆಚ್ಚು ಭಕ್ತಿಯಿರುವವನಿಗೆ ಆಯಾ ಸಮಯದಲ್ಲಿ ಬುದ್ಧಿಗೆ ಹೊಳೆಯುತ್ತವೆ ಎಂಬುದೇ ಈ ಉಪನಿಷತ್‌ವಚನದ ಸಾರಾರ್ಥ. ಗುರುಭಕ್ತಿಯಿಂದಲೇ ಒಬ್ಬ ವ್ಯಕ್ತಿ ಮಹಾತ್ಮ ಎನಿಸುವುದು.

## ಆಚಾರ್ಯನ ಅವತಾರ

**''ಸಾಕ್ಷಾತ್ ನಾರಾಯಣೋ ದೇವಃ ಕೃತ್ವಾ ಮರ್ತ್ಯಮಯೀಂ ತನುಂ ।
ಮಗ್ನಾನ್ ಉದ್ಧರತೇ ಲೋಕಾನ್ ಕಾರುಣ್ಯಾತ್ ಶಾಸ್ತ್ರಪಾಣಿನಾ ॥''**

ಎಂಬ ವಚನದಂತೆ ಭಗವಂತನೇ ಆಚಾರ್ಯನಾಗಿ ಮನುಷ್ಯ ದೇಹಾಕಾರವನ್ನು ಧರಿಸಿ, ಅವತರಿಸಿ ಕರುಣೆಯಿಂದ ಶಾಸ್ತ್ರಗಳನ್ನು ಬೋಧಿಸಿ ಲೋಕವೆಲ್ಲವೂ ಬಾಳಿ ಬದುಕಿ ಚೆನ್ನಾಗಿರುವಂತೆ ಮಾಡುತ್ತಾನೆ ಎನ್ನುತ್ತದೆ ಶಾಸ್ತ್ರ.

## ಆಚಾರ್ಯಾಭಿಮಾನ–ಅನುಗ್ರಹ

ಶ್ರೀವೈಷ್ಣವರ ಒಂದು ಲಕ್ಷಣವನ್ನು ಹೇಳುವಾಗ ಶ್ರೀನಾರದ ಮಹರ್ಷಿಯ ವಚನವನ್ನು ಆಧರಿಸಿ ಗುರುಪರಂಪರಾ ಪ್ರಭಾವದಲ್ಲಿ ತಿಳಿಸಿರುವ ಲಕ್ಷಣವೇ **'ಪಂಚಮೋಪಾಯನಿಷ್ಠೆ'** ಎಂಬುದು. ಶ್ರೀವೈಷ್ಣವರಿಗೆ **'ಕರ್ಮ–ಜ್ಞಾನ–ಭಕ್ತಿ–ಪ್ರಪತ್ತಿ–ಆಚಾರ್ಯಾಭಿಮಾನ'** ಎಂಬ ಐದು ಉಪಾಯಗಳು ಉಂಟು. ಆದುದರಿಂದ ಇವರನ್ನು ಐಯ್ಯಂಗಾರ್ = ಐದು ಅಂಶಗಳನ್ನು ಉಳ್ಳವರು ಎಂದು ಹೆಸರಿಸಲಾಗಿದೆಯಲ್ಲವೆ!

ಐದನೆಯಾದ ಉಪಾಯವೇ ಬಹಳ ಶ್ರೇಷ್ಠವಾದ 'ಆಚಾರ್ಯಾಭಿಮಾನ' ಎಂಬುದು. ಆಚಾರ್ಯನ ಮಾನಸಿಕ ಸಂಕಲ್ಪದಿಂದಾದ ಕಟಾಕ್ಷವೇ ಈ ಆಚಾರ್ಯಾಭಿಮಾನ=ಆಚಾರ್ಯಾನುಗ್ರಹ. ಇದಕ್ಕೆ ಎಂದೂ ಎಲ್ಲೂ ಯಾರಿಂದಲೂ

ಯಾವ ವಿಧವಾದ ಕೊರತೆಯಾಗಲಿ ವಿರೋಧವಾಗಲಿ ಇಲ್ಲ. ಎಲ್ಲ ಶಾಸ್ತ್ರಗಳೂ, ಎಲ್ಲ ದರ್ಶನಗಳೂ, ಎಲ್ಲ ಮತಗಳೂ, ಧರ್ಮಗಳೂ, ಎಲ್ಲ ಕಲೆಗಳೂ ಈ ಆಚಾರ್ಯಾಭಿಮಾನವನ್ನೂ-, ಇದರಿಂದ ನಮಗೆ ಉಂಟಾಗುವ ಆಚಾರ್ಯಭಕ್ತಿಯನ್ನೂ ತಿಳಿಸುತ್ತವೆ.

ವೇದಾಂತದೇಶಿಕರು ಈ ಆಚಾರ್ಯನುಗ್ರಹದ ಬಗ್ಗೆಯೂ, ಭಗವಂತನ ಅನುಗ್ರಹದ ಬಗ್ಗೆಯೂ ತಮ್ಮ **'ಶತದೂಷಣಿ'** ಗ್ರಂಥದ ಹತ್ತೊಂಬತ್ತನೆಯ ವಾದದಲ್ಲಿ ಸಮರ್ಥನೆ ಮಾಡಿದ್ದಾರೆ.

'ಜ್ಞಾನವು ಭಗವಂತನಲ್ಲಿದೆ. ಆದರಿಂದ ಜೀವನಲ್ಲಿರುವ ಅಜ್ಞಾನವು ನಿವೃತ್ತಿಯಾಗುವುದು' ಎಂದು ನಿಮ್ಮ ಸಿದ್ಧಾಂತದಲ್ಲಿ ಜ್ಞಾನವಿರುವುದೆಲ್ಲೋ, ಅಜ್ಞಾನನಾಶವಾಗುವುದು ಬೇರೇಲ್ಲೋ, ಎಂದಂತಾಗಿ ಜ್ಞಾನವು ಅಜ್ಞಾನವನ್ನು ಎಲ್ಲಿದೆಯೋ ಅಲ್ಲಿ ನಾಶಮಾಡಬೇಕೆಂಬ ನಿಯಮವಿಲ್ಲದೇ ಹೋಗಿ; ಅಜ್ಞಾನದ ನಾಶಕ್ಕೂ ಜ್ಞಾನಕ್ಕೂ ಕಾರ್ಯಕಾರಣಭಾವಸಂಬಂಧವೇ ಇಲ್ಲದಂತಾಗುವುದಲ್ಲವೆ! ಎಂದು ಆಕ್ಷೇಪಿಸಿದರೆ;

ಇದಕ್ಕೆ ಪರಿಹಾರ ನಮ್ಮ ಸಿದ್ಧಾಂತದಲ್ಲಿದೆ. ಹೇಗೆಂದರೆ ಭಗವಂತನಲ್ಲಿರುವ ಜ್ಞಾನವು ವಿಶೇಷ ಶಕ್ತಿ ರೂಪವಾಗಿ ಪರಿಣಮಿಸಿ ಜೀವನಿಗೆ ಬಂದು ಸೇರುವುದು ಎಂಬುದೇ ನಮ್ಮ ಸಿದ್ಧಾಂತ. ಭಗವಂತನಾದ ಈಶ್ವರನೇ ಮುಂತಾದವರಿಗೂ ಈ ಶಕ್ತಿಯ 'ಸಂಕ್ರಾಂತಿ'=ಮತ್ತೊಬ್ಬರಿಗೆ ಅಂಟಿಸುವ ಸಾಮರ್ಥ್ಯವಿದೆಯಾಗಿ ಜೀವನಲ್ಲಿ ಆದರಿಂದ ಅಜ್ಞಾನ ನಾಶವಾಗುವುದರಿಂದ ಕಾರ್ಯಕಾರಣಗಳು ಒಂದೆಡೆ ಸಂಬಂಧಿಸಿಯೇ ಫಲಿತಾಂಶ ಕೊಡುತ್ತವೆ ಎಂಬ ತಾರ್ಕಿಕ ನಿಯಮ ನಮ್ಮ ಸಿದ್ಧಾಂತದಲ್ಲಿದೆ. ಜೀವ-ಬ್ರಹ್ಮ ಭೇದ, ಒಂದರಿಂದ ಮತ್ತೊಂದಕ್ಕೆ ಶಕ್ತಿದಾನರೂಪವಾದ **'ಉಪಬೃಂಹಣ'** ಕಾರ್ಯಗಳು, ಇದೆಲ್ಲ ನಿಮ್ಮ ಸಿದ್ಧಾಂತಕ್ಕಿಲ್ಲವಾಗಿ ಅವ್ಯವಸ್ಥೆ ನಿಮಗೇ ಹೊರತು ನಮಗಲ್ಲ' ಎಂದು.

ಇಲ್ಲಿ ಶತದೂಷಣಿಯ ಪ್ರಾಚೀನ ವ್ಯಾಖ್ಯಾನವಾದ **'ಚಂಡಮಾರುತ'** ದಲ್ಲಿ ದೊಡ್ಡಯ್ಯಾಚಾರ್ಯರು ಇದನ್ನು ವಿವರಿಸಿದ್ದಾರೆ. ಶಕ್ತಿವಿಶೇಷ ಎಂದರೆ - ಸಂಕಲ್ಪರೂಪವಾದ ಜ್ಞಾನ. ಈಶ್ವರನೇ ಮುಂತಾದವರಿಗೆ ಎಂದರೆ ಭಗವಂತ-ಯೋಗಿ ಮುಂತಾದವರಿಗೆ ಎಂದರ್ಥ. ಯೋಗಿಗಳಾದ ಆಳ್ವಾರುಗಳಿಗೂ, ಆಚಾರ್ಯರುಗಳಿಗೂ ಅನುಗ್ರಹಶಕ್ತಿಯಿರುವುದರಿಂದ ಅನುಗ್ರಹಕ್ಕೆ ಪಾತ್ರರಾದ ಅಜ್ಞಾನಿಜನರಿಗೆ ಅಜ್ಞಾನವು ತೊಲಗಿ ಹೋಗುವುದು ಎಂಬುದು ಈ ಪ್ರಕರಣದ ನಿಶ್ಚಿತಾರ್ಥ.

ಆದುದರಿಂದಲೇ ವೇದಾಂತಚಾರ್ಯರು **'ಆಚಾರ್ಯಾದಿಹ ದೇವತಾಂ ಸಮಧಿಕಾಂ ಅನ್ಯಾಂ ನ ಮನ್ಯಾಮಹೇ'** ಗುರುವಿಗಿಂತ ಮಿಗಿಲಾದ ದೇವರೊಂದಿಲ್ಲ ಎಂದು ಘೋಷಿಸುತ್ತಾರೆ.

## ಭಗವದ್‌ರಾಮಾನುಜರ ವೈಭವ

ಹೀಗೆ ಶ್ರೀವೈಷ್ಣವರಾಗಿರುವ ನಮಗೆಲ್ಲ ಉಡೈವರ್=ಉಳ್ಳವರು=ಉಭಯವಿಭೂತ್ಯೈಶ್ವರ್ಯವನ್ನು ಉಳ್ಳವರು ಎಂದು ಪ್ರಸಿದ್ಧರಾದ ಭಗವದ್ರಾಮಾನುಜರು ಮುಖ್ಯರಾದ ಆಚಾರ್ಯರು. ತೆನ್‌ಕಲೆ-ವಡಕಲೆ-(ದಕ್ಷಿಣ ವಿದ್ಯೆ-ಉತ್ತರ ವಿದ್ಯೆ) ಎಂಬ ಭೇದಗಳನ್ನು ಇಟ್ಟುಕೊಳ್ಳದ ಎಲ್ಲ ಆಚಾರ್ಯರೂ ಈ ವಿಷಯವನ್ನು ಸ್ಪಷ್ಟವಾಗಿಯೇ ಹೇಳಿ ತಿಳಿಸಿರುವರು.

ಭಗವದ್ರಾಮಾನುಜರ ಚಿಕ್ಕಮ್ಮನ ಮಗನೂ, ಪರಮ ವೈರಾಗ್ಯಭೂಷಣರೂ ಆದ **'ಎಂಬಾರ್'** ಎಂಬ ಗೋವಿಂದಮುನಿಯವರು ಹೇಳಿರುವ ಈ ಕೆಳಗಿನ ಒಂದೇ ವಚನ ಸಾಕು ಎಲ್ಲರಿಗೂ -

**"ತಸ್ಮಿನ್ ರಾಮಾನುಜಾರ್ಯೇ ಗುರುರಿತಿ ಚ ಪದಂ ಭಾತಿ, ನಾನ್ಯತ್ರ; ತಸ್ಮಾತ್ ಶಿಷ್ಟಂ ಶ್ರೀಮದ್‌ಗುರೂಣಾಂ ಕುಲಮಿದಮಖಿಲಂ ತಸ್ಯ ನಾಥಸ್ಯ ಶೇಷಃ ॥"**

ಎಲ್ಲ ಆಚಾರ್ಯರೂ ರಾಮಾನುಜರೆನಿಸಿದ ಇವರಿಗೆ ಶೇಷಭೂತ=ಅಡಿಯಾಳಾಗಿ ಪರತಂತ್ರರಾಗಿ ಇರುವವರೇ. ಆ ರಾಮಾನುಜರೊಬ್ಬರಿಗೆ ನಮ್ಮ ಸಂಪ್ರದಾಯದಲ್ಲಿ 'ಗುರು' ಎಂಬ ಹೆಸರು ಸರಿಯಾಗಿದೆ - ಎಂಬುದು ಇದರ ಸಾರಾರ್ಥ.

## ಶ್ರೀರಾಮಾನುಜ ಮಂತ್ರ ರಹಸ್ಯ

ಈ ಅಂಶಗಳನ್ನು ಗಮನಿಸಿಯೇ ಸಂಪ್ರದಾಯದಲ್ಲಿ ಎಲ್ಲರೂ ತಾವು ಮಾಡುವ ಮದುವೆ, ಮುಂಜಿ ಮುಂತಾದುದರ ಲಗ್ನ ಪತ್ರಿಕೆಗಳಲ್ಲೂ, ಬರೆಯುವ ಕಾಗದಗಳಲ್ಲೂ ಗ್ರಂಥಗಳ ಆದಿಯಲ್ಲೂ, ಕಡೆಯಲ್ಲೂ **'ಶ್ರೀಮತೇ ರಾಮಾನುಜಾಯ ನಮಃ'** ಎಂಬ ಅಗಸ್ತ್ಯಪ್ರೋಕ್ತವಾದ ದ್ವಯಮಂತ್ರದ ಉತ್ತರ ವಾಕ್ಯವನ್ನೇ ಮೊದಲು ಬರೆಯುವ ಪದ್ಧತಿ ಇಟ್ಟುಕೊಂಡಿದ್ದಾರೆ. ಹೊಸದಾಗಿ **'ಎಂಬೆರುಮಾನಾರ್ ತಿರುವಡಿಹಳೇ ಶರಣಂ'** ಎಂದು ಭಾಷೆಯನ್ನು ವ್ಯತ್ಯಾಸಮಾಡಿ ಬರೆಯುವುದೂ ಆಗಿದೆ. ಹೀಗೆಯೇ ಹೊಸದಾಗಿ **'ಶ್ರೀಮದ್**

**ವರವರಮುನಯೇ ನಮಃ'** ಎಂದೋ **'ಶ್ರೀಮನ್ನಿಗಮಾನ್ತ ಮಹಾದೇಶಿಕಾಯ ನಮಃ'** ಎಂದೋ ಬರೆಯುವುದೂ ಇದರೊಡನೆ ಸೇರಿಕೊಂಡುಬಂದಿದೆ. ಈ ರೀತಿಯ ಹೊಸವಚನಗಳೆಲ್ಲವೂ **'ಶ್ರೀಮತೇ ರಾಮಾನುಜಾಯ ನಮಃ'** ಎಂಬ ರಾಮಾನುಜದ್ವಯಮಂತ್ರದ ಉತ್ತರ ವಾಕ್ಯದಲ್ಲಿರುವ **'ಶ್ರೀಮತೇ'** ಎಂಬ ಪದದ ಶ್ರೀಯಲ್ಲಿ, ರಾಮಾನುಜರ ಸ್ವತ್ತಾಗಿ ಐಶ್ವರ್ಯವಾಗಿ ಅಧೀನವಾಗಿ ಸೇರಿರುತ್ತದೆ ಎಂದು ತಿಳಿದರೆ ಸಾಕು.

## ಶ್ರೀರಾಮಾನುಜ ರಹಸ್ಯತ್ರಯ

ಹೀಗೆ ಹಿರಿಯ ಉತ್ತಮ ಆಚಾರ್ಯರಾಗಿ ಅವತರಿಸಿ ನಮ್ಮ ಮಹಾಪುರುಷನಾದ ಭಗವಂತನನ್ನು ಮೀರಿಸಿದ **"ಎಂ ಪೆರುಮಾನಾರ್"** ನಮ್ಮ ಸ್ವಾಮಿಗಳು ಎಂಬ ಬಹು ವಚನದಿಂದ ಶ್ಲಾಘಿತರಾಗಿರುವ **'ರಾಮಾನುಜ'**ರ – **'ರಹಸ್ಯತ್ರಯ'** ಎಂಬ ಮಂತ್ರ–ವಾಕ್ಯ–ಶ್ಲೋಕಗಳು ಅವರ ಶಿಷ್ಯರಾಗಿರುವ ನಮಗೆಲ್ಲರಿಗೂ ಉಪನಿಷತ್ತಿನಲ್ಲಿ ತಿಳಿಸಿರುವ ವಿಶೇಷ ಫಲಗಳನ್ನೆಲ್ಲ ಉಂಟುಮಾಡುವುವು ಎಂಬ ಒಂದು ನಿಶ್ಚಯವನ್ನು ನಮ್ಮ ಹಿರಿಯರಾದ ಪೂರ್ವಿಕರೂ, ಋಷಿಗಳೂ ಸ್ಪಷ್ಟವಾಗಿ ಹೇಳಿ ತಿಳಿಸಿರುತ್ತಾರೆ.

ಲಕ್ಷ್ಮಣನು ಆದಿಶೇಷನ ಅವತಾರ ಎಂದೂ, ಯತಿರಾಜ ರಾಮನುಜರು ಆದಿಶೇಷನ ಅವತಾರವೆಂದೂ, ಆ ಕಾಲದ ಹಿರಿಯರು ಸಾಕ್ಷಾತ್ಕರಿಸಿರುವುದರಿಂದ ಆ ರಾಮಾನುಜರ ಪೂರ್ವಾವತಾರದ ಮಂತ್ರಗಳೇ ಈಗಲೂ ನಡವಳಿಕೆಯಲ್ಲಿ ಬರುತ್ತಿದೆಯೆಂದು ಇಲ್ಲಿ ಅದನ್ನೇ ಸ್ವೀಕರಿಸಲಾಗಿದೆ.

**'ಶ್ರೀರಾಮಾನುಜ ರಹಸ್ಯತ್ರಯ'** ವನ್ನು ಕೆಲವರಿಗೆ ಮಾತ್ರ ಉಪದೇಶಿಸುವ ಸಂಪ್ರದಾಯವು ಕೆಲವು ಸಿಂಹಾಸನಾಧಿಪತಿಗಳಾದ ಶ್ರೀವೈಷ್ಣವಾಚಾರ್ಯಪುರುಷರ ತಿರುಮಾಳಿಗೆಗಳಲ್ಲಿ ಉಂಟು. ಈಗಲೂ ತಿರುನಾರಾಯಣಪುರವೆಂಬ ಮೇಲ್ಕೋಟೆಯಲ್ಲಿ ಶ್ರೀವಂಗಿಪುರನಂಬಿ ತಿರುಮಾಳಿಗೆಯಲ್ಲಿ ಈ ಸಂಪ್ರದಾಯವಿದೆ.

## ರಾಮಾನುಜ ರಹಸ್ಯತ್ರಯ ಸೂತ್ರಗ್ರಂಥ

ಹೀಗೆ ಸಂಪ್ರದಾಯದಲ್ಲಿ ಅಸಾಧಾರಣವಾದ ಮಂತ್ರವನ್ನು ಒಳಗೊಂಡಿರುವ ಈ ರಾಮಾನುಜರಹಸ್ಯತ್ರಯವನ್ನು ಪರಮೋತ್ತಮ ರಹಸ್ಯವೆಂದು ನಮ್ಮ ಪೂರ್ವಾಚಾರ್ಯರೆಲ್ಲರೂ ಉಪದೇಶಗಳಿಂದ ಅರಿತು ಸ್ವೀಕರಿಸಿದ್ದರು ಎಂಬ ಮಾತನ್ನು

ಎತ್ತಿ ತೋರಿಸುವ ಈ **'ರಾಮಾನುಜ ರಹಸ್ಯತ್ರಯ ಸೂತ್ರ'** ಗ್ರಂಥವನ್ನು ನಮ್ಮ ಪೂರ್ವಾಚಾರ್ಯರಾದ 'ಅಟಿಹಿಯಮಣವಾಳಪ್ಪೆರುಮಾಳ್ ನಾಯನಾರ್' ಎಂಬ **'ದ್ರಾವಿಡಬ್ರಹ್ಮಸೂತ್ರಕಾರ'**ರು ರಚಿಸಿದ್ದಾರೆಂದು ತಿಳಿದುಬರುತ್ತದೆ.

ಈ ಗ್ರಂಥವು ಒಬ್ಬ ಆಂಗ್ಲ ಸಂಶೋಧಕ ಮಹಾಶಯನಲ್ಲಿದ್ದು, ಓಲೆಗರಿಗಳಲ್ಲಿ ಬರೆದಿಟ್ಟಿದ್ದ ಅದನ್ನು ಶ್ರೀಮದುಭಯವೇದಾಂತ ಪ್ರವರ್ತಕಾಚಾರ್ಯರಾಗಿದ್ದ ಮಹಾವಿದ್ವಾನ್. ಆ. ಮು. ಶ್ರೀನಿವಾಸಾಚಾರ್ಯರೆಂಬ ಹಿರಿಯರು ಆ ಆಂಗ್ಲನಿಂದ ನನಗೆ ಕೊಡಿಸಿ ಉಪಕಾರಮಾಡಿದರು. ದಾಸನಾದ ನಾನು ಇದನ್ನು ಈಗಿನಿಂದ ಮೂವತ್ತೈದು ವರ್ಷಗಳ ಹಿಂದೆ ಹಲವಾರು ಆಚಾರ್ಯರಿಗೆ ಓದಿ ತೋರಿಸಿದಾಗ ಅವರೆಲ್ಲರೂ ಇದೊಂದು ಅಪೂರ್ವವಾದ ಅಮೂಲ್ಯವಾದ ಗ್ರಂಥ ಎಂದು ಹೇಳಿದರು. ಈಗ ಇದನ್ನು ಮುದ್ರಿಸಿ ಪ್ರಕಾಶಪಡಿಸಲು ಅವಕಾಶವಾಗಿರುವುದರಿಂದ ಇಲ್ಲಿ ವಿಜ್ಞಾಪಿಸುತ್ತಿದ್ದೇನೆ.

**'ರಾಮಾನುಜ ರಹಸ್ಯತ್ರಯಂ'** ಎಂಬ ಮತ್ತೊಂದು ಗ್ರಂಥವು ತೆಲುಗು ಲಿಪಿಯಲ್ಲಿ ಕ್ರಿ.ಶ. 1911ನೇ ವರ್ಷದಲ್ಲಿ ಅಚ್ಚಾಗಿದೆ. **'ಜ್ಞಾನದೃಷ್ಟಿ ಅಟಿಹಪ್ಪರ್'** ಎಂಬ ಒಬ್ಬ ಮಹಾತ್ಮರು **'ರಾಮಾನುಜ ರಹಸ್ಯತ್ರಯ'**ವೆಂಬ ರಾಮಾನುಜ ತಿರುಮಂತ್ರದ್ವಯ ಚರಮಶ್ಲೋಕಗಳಿಗೆ ವ್ಯಾಖ್ಯಾನದಂತೆ ತಮಿಳು ಸಂಸ್ಕೃತ ಮಿಶ್ರ **'ಮಣಿಪ್ರವಾಳ'** ಎಂಬ ಭಾಷೆಯಲ್ಲಿ ಬರೆದಿದ್ದಾರೆ. ಅದು ಹಲವಾರು ಶ್ರೀವೈಷ್ಣವರಿಗೆ ತಿಳಿದಿದೆ. 1940ನೇ ಕ್ರಿಸ್ತ ವರ್ಷದಲ್ಲಿ **'ಕಂದಾಡೈದಾಶರಥಿ'** ಎಂಬ ಒಬ್ಬ ಆಚಾರ್ಯರು ಅದನ್ನು ತೆಲುಗುಭಾಷೆಗೆ ಅನುವಾದ ಮಾಡಿ, ವ್ಯಾಖ್ಯಾನಿಸಿ ಪ್ರಕಾಶಪಡಿಸಿದ್ದಾರೆ.

ಈಗ ಪ್ರಕಾಶನವಾಗುತ್ತಿರುವ **'ಶ್ರೀರಾಮಾನುಜರ ರಹಸ್ಯಸೂತ್ರ'** ಗ್ರಂಥವು ಈವರೆಗೆ ಶ್ರೀವೈಷ್ಣವ ಸಮುದಾಯದಲ್ಲೇ ಅಪೂರ್ವವಾದುದೊಂದು. ಎಂಬೆರುಮಾನಾರ್ ಎನಿಸಿದ ರಾಮಾನುಜರ ಹಲವಾರು ವಿಶೇಷವೃತ್ತಾಂತಗಳಿಂದ ಅವರ ಆಚಾರ್ಯತ್ವವನ್ನೂ, ವೈಭವವನ್ನೂ, ಆಚಾರ-ಆಚಾರ್ಯಕರ್ತವ್ಯಗಳನ್ನೂ ನಮಗೆ ತಿಳಿಸುವ ಈ ಸೂತ್ರಗ್ರಂಥವು ಎಲ್ಲರೂ ಸಂತೋಷದಿಂದ ಒಪ್ಪಿ ಸ್ವೀಕರಿಸಬೇಕಾದ ರೀತಿಯಲ್ಲಿದೆ. ಹಲವು ಸೂತ್ರಗಳಲ್ಲಿ ಇರುವ ವಿಷಯಗಳೂ, ಪದಗಳೂ **'ಆಚಾರ್ಯ ಹೃದಯಂ'** ಎಂಬ ದ್ರಾವಿಡ ಬ್ರಹ್ಮಸೂತ್ರ ಗ್ರಂಥದಲ್ಲಿರುವಂತೆಯೇ ಒಗಟೆಗಳಂತೆ ತಿಳಿಯಲು ಸ್ವಲ್ಪಕಷ್ಟವಾದರೂ, ಸರಿಯಾದ ವಿದ್ವಾಂಸರು ಇವುಗಳನ್ನು ಒರೆನೋಡಿ, ವ್ಯಾಖ್ಯಾನಿಸಿ ತೋರಿಸಿದರೆ ಮಾತ್ರ ನಮಗೆಲ್ಲಾ ತಿಳಿಯುವಂತೆ ಇವೆ.

ಹೀಗೆ ಈ ಅಪೂರ್ವವಾದ, ಸೂತ್ರಗ್ರಂಥವನ್ನು ಓದಿ ಅರಿತು ಅರಿಕೆ ಮಾಡುವ ಜವಾಬ್ದಾರಿ ಶ್ರೀವೈಷ್ಣವರಾದ ನಮಗೆಲ್ಲ ಉಂಟು. ಹೀಗೊಂದು ಗ್ರಂಥ ಇದೆ ಎಂದೋ, ಈ ಗ್ರಂಥದಲ್ಲಿ ಈ ವಿಷಯಗಳನ್ನು ಹೀಗೆ ಹೀಗೆ ತಿಳಿಸಲಾಗಿದೆ ಎಂದೋ, ಈಗ ಅನುಭವದಲ್ಲಿರುವ ಯಾವ ಸಂಪ್ರದಾಯ ಗ್ರಂಥದಲ್ಲೂ ಬರೆದಿಲ್ಲ. ಆದರೂ ಇದರಲ್ಲಿರುವ ವಿಷಯಗಳೂ ವೃತ್ತಾಂತ ಚರಿತ್ರೆಗಳೂ ರಾಮಾನುಜರನ್ನು ಕುರಿತಾದ ಗುರುಪರಂಪರಾಪ್ರಭಾವ ಮುಂತಾದ ಗ್ರಂಥಗಳಲ್ಲೂ, ದಿವ್ಯದೇಶ ಸಂಪ್ರದಾಯಾಚರಣೆಗಳಲ್ಲೂ ಕಂಡುಬರುತ್ತದೆ.

ಇಂತು ಅರೆಯುರ್ ಶ್ರೀರಾಮಶರ್ಮಾ ಶ್ರೀವಿಕ್ರಮನಾಮಸಂವತ್ಸರ ಶಿತ್ತಿರೈಮಾಸಂ ಮೊದಲನೆಯ ತೇದಿ.

## ರಾಮಾನುಜ ರಹಸ್ಯತ್ರಯದ ಚರ್ಚೆ

ಈ ರಹಸ್ಯತ್ರಯವು ಅಗಸ್ತ್ಯರಿಂದ ಉಪದೇಶವಾಗಿಬಂದು ಶ್ರೀರಾಮ-ಲಕ್ಷ್ಮಣ-ಮಂತ್ರಗಳಲ್ಲಿ ಸೇರಿದೆ ಎಂಬ ಪೂರ್ವಾಚಾರ್ಯ ಸಂಪ್ರದಾಯವನ್ನು ಅರಿಯದ ಕೆಲವರು ಕೆಲಕೆಲವು ಆಕ್ಷೇಪಗಳನ್ನು ಇದರ ಬಗ್ಗೆ ಹೇಳುತ್ತಾರೆ.

### ಆಕ್ಷೇಪಗಳ ಸಂಗ್ರಹ

(1) ಇದು ಅಸಾಂಪ್ರದಾಯಿಕವಾದುದು. (2) ಇದು ವೈದಿಕರಲ್ಲದ ಕೆಲವು ವೈಷ್ಣವರಿಗಾಗಿಯೋ ಉಂಟಾದುದು. (3) ಹೆಂಗಸರಿಗೆ ಮಾತ್ರ ಕೆಲವರು ಉಪದೇಶಿಸುತ್ತಾ ಬರುತ್ತಿದ್ದಾರೆ. (4) ಈ ಉಪದೇಶ ಪಡೆದವರು ಆದಿನ ಆಚಾರ್ಯನಿಗೆ **'ಶರೀರಂ-ಅರ್ಥಂ-ಪ್ರಾಣಂ ಚ ಸದ್ಗುರುಭ್ಯೋ ನಿವೇದಯೇತ್'** ಎಂಬ ವಚನದಂತೆ ಸರ್ವವನ್ನೂ ಒಪ್ಪಿಸಿಬಿಡಬೇಕು. (5) ಇದು ಭಗವಂತನ ರಹಸ್ಯತ್ರಯದ ಒಂದು ಅನುಕರಣೆ ಅಣಕವಾಡವೇ ಹೊರತು ಮೂಲವಾದ ರಹಸ್ಯವೇನಲ್ಲ. (6) ಈಗಲೂ ಕೂಡ ಶಿಷ್ಯರಾದ 74 ಸಿಂಹಾಸನನಾಧಿಪತಿಗಳಾದ ಆಚಾರ್ಯಪುರುಷರಾಗಲಿ, ಮಠಾಧಿಪತಿಗಳಾಗಿರುವ ಸನ್ಯಾಸಿಗಳಾಗಲಿ ಇದನ್ನು ಉಪದೇಶ ಮಾಡುತ್ತಿಲ್ಲ. (8) ಇದರ ಬಗ್ಗೆ ಗ್ರಂಥಗಳೂ ಕೂಡ ತಿರುಮಂತ್ರಾರ್ಥಗ್ರಂಥಗಳಂತೆ ಪ್ರಸಿದ್ಧವಾಗಿಲ್ಲ. (9) ಈಗ ನಡವಳಿಕೆಯಲ್ಲಿರುವ ಯಾವ ವಿಶಿಷ್ಟಾದ್ವೈತ ಸಂಪ್ರದಾಯಗ್ರಂಥಗಳಲ್ಲೂ ಈ ರಾಮಾನುಜರ ರಹಸ್ಯದ ಬಗ್ಗೆ ಉಲ್ಲೇಖವು ಒಂದೆಡೆಯೂ ಇಲ್ಲ.

ಹೀಗೆ ಇದು (1) ಒಂದು ಅಪ್ರಾಮಾಣಿಕ ವಿಷಯ. (2) ಕೃತಕವಾದ ವಿಷಯ. (3) ಅಸಾಂಪ್ರದಾಯಿಕವಾದ ವಿಷಯ (4) ಅಸಭ್ಯ ಆಚಾರ ಇರುವವರು ಇಟ್ಟುಕೊಂಡಿರುವ ವಿಷಯ. ಆದುದರಿಂದ ಯಾವೊಬ್ಬ ಶ್ರೀವೈಷ್ಣವರಿಗೂ ಇದು ಸ್ವೀಕಾರಕ್ಕೆ ಯೋಗ್ಯವಲ್ಲ.

## ಆಕ್ಷೇಪಗಳಿಗೆ ಪರಿಹಾರ

ಇದು (1) ಶ್ರೀಪಾಂಚರಾತ್ರಾಗಮಕ್ಕೆ ಸೇರಿದ ಅಗಸ್ತ್ಯಸಂಹಿತೆಯಲ್ಲಿ **'ಸಪರಿವಾರ ಶ್ರೀರಾಮಮಂತ್ರಕಲ್ಪ'**ದಲ್ಲಿ ಹೇಳಲ್ಪಟ್ಟದಾಗಿದೆ. ಆದುದರಿಂದ ಅಪ್ರಾಮಾಣಿಕವಲ್ಲ. (2) ಆದುದರಿಂದ ಯಾರೋ ಮಾಡಿದಂತಹ ಕೃತಕವೂ ಅಲ್ಲ. (3) ಶಿಷ್ಟಾಗ್ರೇಸರರಾದ ಭಗವದ್ರಾಮಾನುಜರ ಅಂತರಂಗಶಿಷ್ಯರಲ್ಲಿ **'ನವರತ್ನ'**ಗಳು ಎಂದು ಪ್ರಸಿದ್ಧರಾದ ಒಂಬತ್ತು ಆಚಾರ್ಯರ ಪೈಕಿ **'ವಙ್ಗಿಪುರತ್ತು ನಂಬಿ'** ಎಂಬ ಆಚಾರ್ಯರ ಪರಂಪರೆಯಲ್ಲಿ ಇದರ ಉಪದೇಶ ಸಂಪ್ರದಾಯವು ಇಂದಿಗೂ ಇರುವುದರಿಂದ, ಇದು ನಷ್ಟವಾದ ಪರಂಪರೆಗಳಲ್ಲಿ ನಷ್ಟವಾಗದೆ ಉಳಿದುಕೊಂಡು ಶಿಷ್ಟವೆನಿಸಿರುವ ಸಂಪ್ರದಾಯವಾದುದರಿಂದ ಅಸಾಂಪ್ರದಾಯಿಕವೂ ಅಲ್ಲ. ಹೀಗೆ ಕೆಲವು ಆಚಾರ್ಯಪುರುಷರ ಬಳಿ ಈ ಸಂಪ್ರದಾಯ ಇರಲು ಸಾಧ್ಯವಿದೆ. (4) ನಿಧಿಯಂತಹ ಕೆಲವು ವಸ್ತುಗಳನ್ನು ಅಪಹರಿಸಲಾಗದಂತೆ ಕಾಪಾಡಲು, "ಈ ಆಲದ ಮರದ ಮೇಲೆ ಪಿಶಾಚಿ ಇದೆ. ಈ ಮನೆಯಲ್ಲಿ ಭೂತ ಇದೆ. ಈ ಗುಹೆಯಲ್ಲಿ ಯಕ್ಷನಿದ್ದಾನೆ." ಎಂಬಂತೆ, ಕೆಲವು ವದಂತಿಗಳನ್ನು ಬಹಿರಂಗವಾಗಿ ಹುಟ್ಟುಹಾಕುವಂತೆ, ಕೆಲವು ಅಸಭ್ಯಾಚಾರಗಳುಂಟೆಂದು ಹೇಳಿ ಅಯೋಗ್ಯರಾದವರನ್ನು ದೂರ ಇಡಲೆಂಬ ಉದ್ದೇಶ್ಯದಿಂದ ಈ ರೀತಿ ಆರೋಪಿತವಾದ ಅಸಭ್ಯಾಚಾರ ಇರಬಹುದಾದುದರಿಂದ, ಈ ದುರಾಚಾರವು ನಿಜವಲ್ಲ.

ಹೀಗೆ ನಾಲ್ಕು ಬಗೆಯಾದ ಮುಖ್ಯ ಆಕ್ಷೇಪಗಳನ್ನು ತಳ್ಳಿ ಹಾಕಬಹುದಾಗಿದೆ. ಹೀಗೆಯೇ ಇವುಗಳಲ್ಲೇ ಸೇರುವಂತಹ ಕೆಲವು ಆಕ್ಷೇಪಗಳನ್ನೂ ತಳ್ಳಿದಂತೆಯೇ.

ಗ್ರಂಥಗಳಲ್ಲಿ ಉಲ್ಲೇಖವಿಲ್ಲವೆಂಬ ಆಕ್ಷೇಪಕ್ಕೆ ಸಮಾಧಾನ ಬೇರೆ ಗ್ರಂಥಗಳಲ್ಲಿ ಈ ವಿಷಯಕ್ಕೆ ಪ್ರಸಂಗವಿಲ್ಲ ಎಂಬುದೇ ಆಗಿದೆ. ಇದನ್ನು ಕುರಿತಾದ ಗ್ರಂಥಗಳಿಲ್ಲವಲ್ಲಾ! ಎಂಬುದಕ್ಕೆ – ಇದ್ದಂತಹ ಗ್ರಂಥಗಳನ್ನು ಪರಂಪರೆಯಾಗಿ ಅಧ್ಯಯನ ಮಾಡದೆ, ಉಪದೇಶಿಸದೆ, ಬರೆದಿಡದೆ, ಬರೆದವುಗಳನ್ನು ಸರಿಯಾಗಿ ಕಾಪಾಡದೆ, ಉದಾಸೀನವಾಗಿದ್ದ ಮನುಷ್ಯರ ದೋಷವೇ ಕಾರಣ. ಈಗ ಸಿಕ್ಕಿರುವ

ಗ್ರಂಥಗಳನ್ನು ಓದಿ ಅರಿತು ವಿಮರ್ಶಿಸಿ ತಿಳಿಸಿಕೊಡುವ ಅವಕಾಶವಿದೆಯಾಗಿ ಆಕರಗಳಿಲ್ಲ ಎಂಬ ಕೊರತೆಯೂ ಇಲ್ಲ.

ಹೀಗೆ ಕೆಲವರು ಮಾತ್ರ ಹೇಳುವ ದೋಷಗಳೊಂದೂ ಈ **'ರಾಮಾನುಜ ರಹಸ್ಯತ್ರಯ'** ಕ್ಕೆ ಅಂಟುವುದಿಲ್ಲದಾಗಿ, ಪರಿಶುದ್ಧವಾದ ಇದನ್ನು ಆಸೆಯೂ ಅರ್ಹತೆಯೂ ಸಂಪ್ರದಾಯವೂ ಸೇರಿರುವವರ ಬಳಿ ಎಲ್ಲರೂ ಕಲಿತುಕೊಳ್ಳಬಹುದಾಗಿದೆ ಎಂದು ವಿಜ್ಞಾಪನೆ ಮಾಡುವವನು ಅರೆಯುರ್ ಶ್ರೀರಾಮಶರ್ಮಾ ರಾಮಾನುಜ ದಾಸಾನುದಾಸನು.

26.4.2000

## ರಾಮಾನುಜರಹಸ್ಯತ್ರಯುವನ್ನು ಅನುಭವಿಸಿದ ಮಹನೀಯರ ಹೇಳಿಕೆಗಳು:

(1) ಅಡಿಯೇನ್ ಎನಿಸಿದ ನನಗೆ ಆಚಾರ್ಯರಾದ ಶ್ರೀ ಉ|| ವೇ|| ಕೋಯಿಲ್ ಕಂದಾಡೈ ವಾಧೂಲ ದೇಶಿಕ ಅಣ್ಣಾವಿಲಪ್ಪನ್ ಕುಮಾರ ಶ್ರೀಶೈಲಾಚಾರ್ಯಸ್ವಾಮಿಯವರು 'ಬಹಳ ಚನ್ನಾಗಿಯೇ ಇರುವ ಇದು ನಮ್ಮ ತಿರುಮಾಳಿಗೆಯ ಸಂಪ್ರದಾಯದಲ್ಲಿ ಇಲ್ಲ' ಎಂದರು.

(2) ನನ್ನ ನ್ಯಾಯೋಪನಿಷದಾಚಾರ್ಯರಾದ ಶ್ರೀ ಉ|| ವೇ|| ಮಹಾವಿದ್ವಾನ್ ಮಂಡಯಂ ಆಳ್ವಾರ್ ತಿರುಮಲೈಯ್ಯಂಗಾರ್ ಸ್ವಾಮಿಯವರು 'ಇದು ನಮಗೆ ಅಸಾಂಪ್ರದಾಯಿಕ. ಇದು ಭಾಷ್ಯಕಾರ ಸನ್ನಿಧಿ ರಾಘವಾಚಾರ್ಯರಿಗೆ ತಿಳಿದಿದೆ' ಎಂದರು.

(3) ತಿರುನಾರಾಯಣಪುರಂ ವಂಗಿಪುರತ್ತು ಆಚ್ಚಿವಂಶದ ತಿರುವಾಯ್‌ಮೊಳಿ ಆಚಾರ್ಯರ್ ಪ್ರೊಫೆಸರ್ ಶ್ರೀ ಉ|| ವೇ|| ವಿ. ಟಿ. ತಿರುನಾರಾಯಣಯ್ಯಂಗಾರ್ಯಸ್ವಾಮಿ ಎಂ. ಎ. ಅವರು ಇದೆಲ್ಲಾ ಕೆಲವು ಆಚಾರ್ಯಪುರುಷರು ಮಾತ್ರ, ತಮಗೆ ಇರುವ ಒಂದು ವಿಶೇಷ ಎಂಬಂತೆ ಹೆಮ್ಮೆಯನ್ನು ಹೇಳಿಕೊಳ್ಳಲು ಇಟ್ಟುಕೊಂಡಿದ್ದಾರೆ. ಇದರ ವಿಷಯವು ಪ್ರಾಮಾಣಿಕವಾಗಿದೆ' ಎಂದರು.

(4) ತಿರುನಾರಾಯಣಪುರಂ ಐಂಬತ್ತಿರುವರ್‌ಸ್ಥಾನಿಕಂನಾಲಾಂ ಸ್ವಾಮ್ಯಂಯತಿರಾಜದಾಸರ್ ವಂಶದವರಾದ ಪ್ರೊಫೆಸರ್ ಎಸ್. ಎಸ್. ರಾಘವಾಚಾರ್ಯರು "ಪ್ರತಾರಣ (ಮೋಸ) ಮಾಡುವವರು ಮಾತ್ರ ಸ್ವೀಕರಿಸಿರುವ ಇದು ಕೃತಕ (ಬೋಗಸ್)" ಎಂದರು.

(5) ತಿರುನಾರಾಯಣಪುರಂ ವಂಗಿಪುರಂ ನಂಬಿಮಠ್ ಭಾಷ್ಯಕಾರಸನ್ನಿಧಿ ವಿದ್ಯಾಭೂಷಣಂ ರಾಘವಾಚಾರ್ಯಸ್ವಾಮಿಯವರು "ಇದು ಸಾಂಪ್ರದಾಯಿಕವಾಗಿ ಹೀಗಿದೆ ಎಂದು ಆಪಾದಚೂಡ – (ಟಾಪ್‌ಟು ಬಾಟಂ) ಎಂಬಂತೆ ಎಲ್ಲವನ್ನೂ ತಿಳಿಸಿ ಮಂತ್ರವನ್ನೂ ತೋರಿಸಿ ಹೇಳಿ ನಮ್ಮ ತಲೆಗೆ ಕಟ್ಟಿದರು.

(6) ತಿರುನಾರಾಯಣಪುರಂ ಮಹಾಕವಿ ಇಳ್ಳೈಯುವಿಲ್ಲಿಜಗ್ಗುವಕುಳ ಭೂಷಣರು "ಅದ್ಭುತವಾದ ಇದೂ, ಈ ಸೂತ್ರಗ್ರಂಥವೂ, ಎಲ್ಲರೂ ಸಂತೋಷಿಸಿ ಸ್ವೀಕರಿಸಿ ಅನುಭವಿಸಬೇಕಾದುದು' ಎಂದರು.

(7) ಮಹಾವಿದ್ವಾನ್ ಶ್ರೀ ಉ|| ವೇ|| ವಾಗಮೃತವರ್ಷಿ ವೇಲುಕ್ಕುಡಿ ವರದಾಚಾರ್ಯ ಸ್ವಾಮಿಯವರು 'ಇದು ಕೆಲವರಲ್ಲಿ ಮಾತ್ರ ಇರುವ ಸಂಪ್ರದಾಯ. ಜ್ಞಾನದೃಷ್ಟಿ ಆಳಹಪ್ಪರ್ ಮಾಡಿದ ಗ್ರಂಥವೊಂದಿದೆ. ಅದನ್ನು ಕೊಡುತ್ತೇನೆ. ನೋಡಬಹುದು. ಇದನ್ನು ನಮ್ಮ ಆಚಾರ್ಯರುಗಳು ಉಪದೇಶಿಸಲಿಲ್ಲವಾದರೂ ವಿಷಯದ ಹಿರಿಮೆಯಿಂದ ಇದು ಸ್ವೀಕಾರಾರ್ಹ' ಎಂದರು.

(8) ಈಗ ಶ್ರೀ ಪೆರುಂಪ್ಪುಂದೂರಿನಲ್ಲೇ ದಯಮಾಡಿಸಿರುವ ಶ್ರೀ ಉ|| ವೇ|| ವ್ಯಾಕರಣ ಮೀಮಾಂಸಾ ವಿದ್ವಾನ್. ಕೋ.ಕಂ.ವಾ. ಅಪ್ಪನ್ ರಾಮಾನುಜಾಚಾರ್ಯ ಸ್ವಾಮಿಯವರು **'ಇದು ಅಸಭ್ಯಾಚಾರಿಗಳಿಗೆ ಸೇರಿದುದು'** ಎಂದರು.

## ರಾಮಾನುಜರಹಸ್ಯತ್ರಯ ಸಂಪ್ರದಾಯ

ಆದಿಶೇಷನ ಅವತಾರವೆಂಬ ವೈಭವವನ್ನು ಪಡೆದ ರಾಮಾನುಜಾಚಾರ್ಯರು, ಮಾಯಾವಿಯಾದ ಇಂದ್ರಜಿತ್ತನ್ನು ವಧೆ ಮಾಡುವುದಕ್ಕಾಗಿಯೇ ಅವತರಿಸಿದ ಲಕ್ಷ್ಮಣ ದೇವರ ಶಕ್ತಿವಿಶೇಷವನ್ನು, **'ದಾಸೋಽಹಂ'** ಎಂದೂ **'ಧರ್ಮಾತ್ಮಾ ಸತ್ಯಸಂಧಶ್ಚ ರಾಮೋ ದಾಶರಥಿಃ'** ಎಂದೂ, ನಿರ್ಭರರಾಗಿ ಇರಬೇಕಾದ ಶ್ರೀ ವೈಷ್ಣವರೆಲ್ಲರನ್ನೂ ಒಟ್ಟಿಗೆ ಸೇರಿಸಿ ಇಡಬೇಕೆಂಬ, ಒಂದು ಒಳ್ಳೆಯ ಮನಸ್ಸು ಮಾಡಿ, ಈ ರಹಸ್ಯತ್ರಯವನ್ನು ತಾವೇ ಉಪದೇಶಿಸಿ, ಭಗವದ್ ಭಾಗವತ–ಆಚಾರ್ಯ ಕೈಂಕರ್ಯವೆಂಬ ಐಶ್ವರ್ಯವನ್ನು ಎಲ್ಲರಿಗಾಗುವಂತೆ ತಲೆಗೆ ಕಟ್ಟಿ ಇಟ್ಟರು. ಈ ಉಪದೇಶಕ್ರಮವೇ ಈಗ ಆಮ್ನಾಯ ಎಂದೂ **'ಸಂಪ್ರದಾಯ'** ಎಂದೂ ಪ್ರಕಾಶಿಸುತ್ತಿದೆ.

ಈ ರಹಸ್ಯತ್ರಯಕ್ಕೆ ನಿರೂಪಕವಾದ ಸೂತ್ರಗಳು ಅರವತ್ತೆಂಟು ಇದ್ದು, ಇವುಗಳಲ್ಲಿ ಮೊದಲೆರಡು ಸೂತ್ರಗಳಲ್ಲೂ, ಅರವತ್ತೇಳನೆಯ ಸೂತ್ರದಲ್ಲೂ ಇದರ ಉಪದೇಶವಾದ ಸಂದರ್ಭವನ್ನು ಹೊರಗೆಡಹಿ ನಿರೂಪಿಸಲಾಗಿದೆ. ಅದು ಹೀಗಿದೆ

(1) ಚತುರವಾದ ರಹಸ್ಯತ್ರಯವನ್ನು, ಸ್ವಾಂಶಾದಿಯುಕ್ತರಾದ ಮೂರು ಯೋಗ್ಯ (ಪಾತ್ರ) ರಾದವರಲ್ಲಿ ಸೋಮ-ಅನನ್ತ-ಪಾದ-ತೀರ್ಥಸರೋವರಗಳ ತೀರದಲ್ಲಿ, ಭೂತಾದಿಪ್ರಮೇಯ ಸಹಿತ, ಮೂರು ಕಾಲದಲ್ಲಿ, ಉಪದೇಶಿಸಿರುವುದರಿಂದ, ಇದೇ ಚರಮಪರ್ವಾಧಿಕಾರಿಗೆ ಆವಶ್ಯಕವಾಗಿ ಅಪೇಕ್ಷಿತವಾಗಿದೆ.

(2) ನಾಮಸಂಗ್ರಹ-ಆಕಾರ-ಯೋಗ-ಪಾದುಕಾ-ಭಾವಗಳಲ್ಲಲ್ಲವೆ! ಸ್ವಾಂಶಾದಿಗಳ ಸೂಚನೆ ಇದೆ.

(3) ಅಗಸ್ತ್ಯರು ಕಂಡುಕೊಂಡ (ಸಾಕ್ಷಾತ್ಕರಿಸಿದ) ಮಂತ್ರ ರಹಸ್ಯವನ್ನೇ ತಾವೂ ಸೋಮಾನನ್ತ ಪಾದತೀರ್ಥಸರಸ್ ತೀರಗಳಲ್ಲಿ ಪ್ರಕಟಪಡಿಸಿದಂತೆ, "ಭಗವಂತನ ರಹಸ್ಯತ್ರಯಕ್ಕೆ ಅನುಬಂಧವಾಗಿ ಇದೆ ಇದು" ಎಂದು ವಿಶೇಷ ಆರ್ಹತೆ ಇರುವವರು ಸ್ವೀಕರಿಸಬೇಕು.

## ರಾಮಾನುಜರಹಸ್ಯತ್ರಯದ ಸಂಪ್ರದಾಯ

ದಾಸನಾದ ನನಗೆ ತಂದೆಯಾಗಿರುವ ಸರ್ವೋದಯ ಋಷಿ-ವಿದ್ವಾನ್-ಶ್ರೀ ಉ|| ವೇ|| ಅರೆಯರ್ ಸ್ವಾಮಿಯವರು ಈ ದಿನ ಅಪ್ಪಣೆ ಮಾಡಿದಂತೆ, ದಾಸನಾದ ನನಗೆ ತಿಳಿದ ರೀತಿಯಲ್ಲಿ ಇದನ್ನು ವಿವರಿಸಲು ಅರಂಭಿಸುತ್ತೇನೆ.

ಭೋಗ-ಮೋಕ್ಷ ಎಂಬ ಎರಡಕ್ಕೂ ಆಗುವ ಭಗವಂತನ ಮಂತ್ರಗಳಂತಲ್ಲದೆ ಮೋಕ್ಷ ಸಂದೇಹವೇ ಇರದಂತೆ, ಮೋಕ್ಷವೊಂದಕ್ಕೇ ಕಾರಣವಾದ ಈ ಆಚಾರ್ಯರಹಸ್ಯವನ್ನು **'ಚತುರಾ ಚತುರಕ್ಷರೀ'** ಎಂದು ಕೂರತ್ತಾಳ್ವಾನ್ ಅವರು ಹೇಳಿದ್ದಾರೆ.

ಇದರಲ್ಲಿ ತಿರುಮಂತ್ರಕ್ಕೆ – **ಅಂಶಪಾತ್ರವು,** ಕೂರತ್ತಾಳ್ವಾನ್. ಅಂಶವು ಹಾರೀತಗೋತ್ರಾಂಶ. **'ಅಂಶ'** ಎಂದರೆ **'ವಿಶೇಷಣ'** ಎಂದು ಹೇಳುವುದಾದರೆ ರಾಮಾನುಜರ ತ್ರಿದಂಡದ ಪವಿತ್ರವಸ್ತ್ರದಂತೆ ಶೋಧಕಾಂಶವಾಗಿ ನಿಂತವರು ಕೂರತ್ತಾಳ್ವಾನ್. **ನಾಮಸಂಗ್ರಹವು** – ರಾಮಾನುಜ ಎಂಬ ಹೆಸರಿನ ಸಂಕ್ಷೇಪವಾದ 'ರಾಮ' ಎಂಬುದು. ಕೂರತ್ತಾಳ್ವಾನರಿಗೆ **'ಶ್ರೀರಾಮಮಿಶ್ರ'** ಎಂದಲ್ಲವೇ ಹೆಸರು. **'ಪ್ರಮೇಯ'** ಎಂದರೆ ಇಲ್ಲಿ **'ಭೂತಂ'** ಎಂದಿಟ್ಟುಕೊಳ್ಳಬೇಕು. ರಾಮಾನುಜರ ಆಗಿ ಹೋದ ಅವತಾರಗಳಲ್ಲಿ ಆದಿಶೇಷ ಮುಂತಾದ ಅವತಾರಗಳೇ ಭೂತ ಎಂದು ಅಭಿಪ್ರಾಯ. **'ಉಪದೇಶ ಸ್ಥಾನ'** – ಕೀೞ್‌ನಾಡು ಎಂಬ ಪೂರ್ವದಿಕ್ಕಿನ ದೇಶದಲ್ಲಿ, ತೊಂಡೈಮಂಡಲದಲ್ಲಿ, ಶ್ರೀಕಾಂಚಿಯಲ್ಲಿ **'ಅನನ್ತಸರಸ್'** ಎಂಬ

ಪುಷ್ಕರಿಣಿಯ, ದಡದಲ್ಲಿ ಸನ್ನಿಧಿ ಮಾಡಿದ್ದ **'ಮಹಾಸುದರ್ಶನ' ದೇವರಗುಡಿ.** ಸಮಯ ಪ್ರಾತಃಕಾಲ.

ಇದರಲ್ಲಿ ದ್ವಂಯುಕ್ಕೆ – **ಭಾವಪಾತ್ರ** – ವಡುಹನಂಬಿ ಎಂಬ ಆಂಧ್ರಪೂರ್ಣರು. **'ಪಾದುಕಾಭಾವ'** ಎಂದರೆ ರಾಮಾನುಜರ ಪಾದುಕೆಗಳನ್ನೇ ಪರಮ ದೈವವೆಂದು ತಿಳಿದು ಆರಾಧಿಸುತ್ತಿದ್ದ ಅವರ ಭಾವನಾ ವಿಶೇಷ. **'ಪ್ರಮೇಯ'**ವೆಂದರೆ – ಇಲ್ಲಿ ಭವ್ಯ–ಸುಂದರವಾದ ರಾಮಾನುಜರ ಶರೀರಾಕಾರ. **'ಉಪದೇಶಸ್ಥಾನ'** ಮೇಲ್ ನಾಡಿನಲ್ಲಿ ಗಂಗಮಂಡಲದಲ್ಲಿ ತಿರುನಾರಾಯಣಪುರಕ್ಕೆ ಪಶ್ಚಿಮ ದಿಕ್ಕಿನಲ್ಲಿ ಮಿರಿಳಾಸಾಲಗ್ರಾಮವೆಂಬ ಕ್ಷೇತ್ರದಲ್ಲಿ – ಮುದಲಿಯಾಣ್ಡಾನ್ ಎಂಬ ಆಚಾರ್ಯರ ಶ್ರೀಪಾದತೀರ್ಥ ಪುಷ್ಕರಿಣಿಯಾಗಿರುವ ಸರಸ್ಸಿನ ದಡದಲ್ಲಿರುವ ಯೋಗನರಸಿಂಹ ದೇವರ ಸನ್ನಿಧಿ ಗುಡಿ. ಸಮಯ ಸಾಯಂಕಾಲ.

ಇದರಲ್ಲಿ ಚರಮಶ್ಲೋಕಕ್ಕೆ **'ಯೋಗಪಾತ್ರ'** – **'ಎಂಬಾರ್'** ಎಂಬ ಗೋವಿಂದಜೀಯರು. **'ಯೋಗ'**ವೆಂದರೆ – ಆಕಾರಯೋಗ. **ಆಕಾರಯೋಗವೆಂದರೆ** ಶ್ರೀರಾಮಾನುಜರ ದಿವ್ಯಭವ್ಯ ಸುಂದರ ಶರೀರವನ್ನೇ ಧ್ಯಾನಿಸುವುದರಿಂದ ಏರ್ಪಟ್ಟ **'ರಾಮಾನುಜಪದಛ್ಛಾಯಾ'** = ರಾಮಾನುಜರ ಪಾದದ ನೆರಳಿನಂತೆ ಇರುವ ಸಂಗತಿ. ಇದು ಎಂಬಾರ್ ಆಚಾರ್ಯರಿಗೆ ಅಸಾಧಾರಣವಾಗಿದ್ದ ಒಂದು ಯೋಗ, ಎಂದು ಗುರುಪರಂಪರಾ ಪ್ರಭಾವಾದಿ ಗ್ರಂಥಗಳಲ್ಲಿ ನೋಡಿ ತಿಳಿಯತಕ್ಕದ್ದು. **'ಪ್ರಮೇಯ'**–ಭವಿಷ್ಯತ್ ಆದ ರಾಮಾನುಜರ ದಿವ್ಯಮಂಗಳ ವಿಗ್ರಹಗಳು. ನಮ್ಮಾಳ್ವಾರು ಹೇಳಿ ನಾಥಮುನಿ ಕೇಳಿದಂತೆ 'ಕಲಿಯೂ ಕೆಡುವುದು' ಎಂದೂ, **'ಕಲೌ ಕಶ್ಚಿತ್ ಭವಿಷ್ಯತಿ'** ಎಂಬ ಋಷಿ ವಚನದಂತೆಯೂ, ಕಣ್ಣು ಸ್ವೀಕರಿಸಿದ ಭವಿಷ್ಯದಾಚಾರ್ಯ ಸ್ವರೂಪವೇ ಇವು. **'ಉಪದೇಶಸ್ಥಾನ'** ತೆನ್‌ನಾಟ್ಟ್ ಎಂಬ ಕಾವೇರಿಯ ದಕ್ಷಿಣ ಪ್ರದೇಶದ ಚೋಳಮಂಡಳದಲ್ಲಿ ಪೆರಿಯತಿರುವರಂಗಂ ಕೋಯಿಲ್ ಎಂದು ಪ್ರಸಿದ್ಧವಾಗಿರುವ ಶ್ರೀರಂಗದಲ್ಲಿ ಚಂದ್ರಪುಷ್ಕರಿಣಿ ತೀರ್ಥ ಸರಸ್ಸಿನ ದಡದಲ್ಲಿರುವ ಚಕ್ರವರ್ತಿ ತ್ತಿರುಮಹನೆನಿಸಿದ ಶ್ರೀರಾಮದೇವರ ಗುಡಿ. ಸಮಯ ಮಧ್ಯಾಹ್ನ.

**'ಸರಸ್‌ತೀರಂಗಳಿಲುಂ'** ಎಂಬ ಸೂತ್ರ ವಚನದಲ್ಲಿರುವ **'ಉಂ'** ಎಂಬ ಅವ್ಯಯಕ್ಕೆ **'ಇಲ್ಲಿ ಹೇಳದೆ ಉಳಿದಿರುವುದನ್ನೆಲ್ಲ ಸೇರಿಸಿಕೊಳ್ಳಬೇಕು'** ಎಂದರ್ಥ. ಈ ಹಿಂದೆ ಹೇಳಿದ ಕೆಲವು ವಿಶೇಷ ಅರ್ಹತೆಯಿರುವವರಿಗಾದಂತೆಯೇ

ಬೇರೊಂದು ಸ್ಥಾನದಲ್ಲಿ ಈ ರಹಸ್ಯೋಪದೇಶವಾಗಿದೆ ಎಂಬುದನ್ನು ಇದು ತಿಳಿಸುತ್ತದೆ.

ಇಲ್ಲಿ **'ದ್ರವಿಡವ್ಯಾಖ್ಯಾನ ಚಕ್ರವರ್ತಿ'** ಎಂದು ಪ್ರಸಿದ್ಧರಾಗಿದ್ದ ಪೆರಿಯಾವಾಚ್ಛಾನ್‌ಪಿಳ್ಳೈಯವರ ಸ್ವೀಕೃತ ಪುತ್ರರಾಗಿ **'ಜ್ಞಾನಾಧಿರಾಜ'** ಎಂಬ ಪ್ರಸಿದ್ಧಿಯುಳ್ಳ ನಾಯನಾರಾಚ್ಚಾಪಿಳ್ಳೈ ಎಂಬ ಆಚಾರ್ಯರು ಸರ್ವಕ್ರತುಯಾಜಿಯಾಗಿ ಜ್ಞಾನಕ್ರತುವಿನ ರೂಪದಲ್ಲಿ ಮಾಡಿದ **'ಚರಮೋಪಾಯ ನಿರ್ಣಯ'** ಎಂಬ ಗ್ರಂಥದಲ್ಲಿರುವ ವಿಶೇಷ ವೃತ್ತಾಂತಗಳನ್ನು ಓದಿ ತಿಳಿಯಬೇಕು. ಇದನ್ನೇ **'ಜ್ಞಾನದೃಷ್ಟಿ ಅಳಹಪ್ಪರ್'** ಎಂಬುವರು ತಮ್ಮ ರಾಮಾನುಜ ರಹಸ್ಯತ್ರಯ ವ್ಯಾಖ್ಯಾನದಲ್ಲಿ ಒಂದೆಡೆ ಸ್ವೀಕರಿಸಿರುವರು. ಅದೇನಂದರೆ:-

"ಈ ಅರ್ಥವನ್ನು **'ಜ್ಞಾನಮಂಡಪ'** ವಾದ ತಿರುನಾರಾಯಣಪುರದಲ್ಲಿ ರಾತ್ರಿಕಾಲದಲ್ಲಿ (1) ಮುದಲಿಯಾಣ್ಡಾನ್, (2) ಎಂಬಾರ್ (3) ತಿರುನಾರಾಯಣಪುರತ್ತು ಅರೆಯರ್ (4) ಮಾರುತಿಯಾಣ್ಡಾನ್ (5) ಉಕ್ಕಲಮ್ಮಾಳ್, ಎಂಬ ಈ ಐವರಿಗೂ 'ಇದನ್ನು ಒಬ್ಬರಿಗೂ ಪ್ರಕಟಪಡಿಸದೆ ಇರಿ. ಇದರಲ್ಲಿ ನಂಬಿಕೆ ಉಂಟಾಗುವುದು ಬಹಳ ದುರ್ಲಭ' ಎಂದು ಹೇಳಿ; 'ನಾವೇ ಸರ್ವೋತ್ತಾರಕರು ತಮ್ಮನ್ನು ಆಶ್ರಯಿಸಿ ನಿರ್ಭರರಾಗಿ (ಭಾರವಿಲ್ಲದವರಾಗಿ) ಇರಿ. ನಿಮಗೆ ಯಾವ ಪಾಪವೂ ಬರದಂತೆ ಮೇಲ್ಮಟ್ಟಕ್ಕೆ ಏರುವಿರಿ." ಎಂದು ಅನುಗ್ರಹಿಸಿದರು (ರಾಮಾನುಜರು). ಅಂದು ಶ್ರೀ ಕೃಷ್ಣನು **'ಮಾಂ'** ಎಂದು ತನ್ನ ಶರೀರವನ್ನೇ ಅರ್ಜುನನಿಗೆ ತೋರಿಸಿದಂತೆ ಈ ಐವರಿಗೂ ಇಲ್ಲಿ ಮುಟ್ಟಿ ತೋರಿಸಿದ ರೀತಿಯಿಂದ, ಮಹಾಮತಿಗಳಾದ ಇವರು ನೋಡಿ ಇನ್ನುಮೇಲೆ ನಮಗೆ **'ಎಂಬೆರುಮಾನಾರರ ಸಿರಿಯಡಿಗಳೇ ಶರಣು'** ಎಂದು ವಿಶ್ವಾಸವಿಟ್ಟು ನಿರ್ಭರವಾಗಿ ಇದ್ದುದರಿಂದ ಇದೇ ಬಹಳ ಒಳ್ಳೆಯದು. ಈ ಅರ್ಥವು ಪರಮರಹಸ್ಯ ಎಂದು ನಮ್ಮ ಆಚಾರ್ಯರು ಹೇಳಿದ್ದಾರೆ" ಎಂದು.

ಹೀಗೆ ಈ **'ಶ್ರೀರಾಮಾನುಜ ಪರಮರಹಸ್ಯತ್ರಯ'** ವೂ ಒಂದು ಕ್ರಮದಲ್ಲಿ ಮೇಲೆ ತಿಳಿಸಿದ ಐದು ಆಚಾರ್ಯರಿಗೂ ಉಪದೇಶವಾಗಿ ಬಂದುದು ಎಂದು ನಿಶ್ಚಯಿಸಿದಾಗ:

(1) ಉಪದೇಶಕ್ಕೆ **ಸತ್ಪಾತ್ರರು** ಈ ಐವರು (2) **ಸ್ವಾಂಶಾದಿಯೋಗವು** "ಆಚಾರ್ಯರು ಮೊದಲ ರೂಪ ಶಿಷ್ಯನು ಅನಂತರದ ರೂಪ" ಎಂಬ ವೇದವಚನದಂತೆ ಶಿಷ್ಯರಾದವರಿಗೆ ತಕ್ಕಂತೆ ಬಂದಿರುತ್ತದೆ. (3) **ಪ್ರಮೇಯವು** ಭೂತ-ಭವಿಷ್ಯತ್-ವರ್ತಮಾನ ಸ್ವರೂಪಗಳು. (4) **'ಉಪದೇಶಸ್ಥಾನ'** ಮೇಲ್‌ನಾಡಾದ ಕನ್ನಡನಾಡಿನಲ್ಲಿ ಗಂಗ ಮಂಡಲದೊಳಗೆ

ಕಾವೇರಿಗೆ ಬಡಗ ತೀರದಲ್ಲಿ ವೈಕುಂಠವರ್ಧನ ಕ್ಷೇತ್ರದಲ್ಲಿ **'ಕುರುವಂಕನಾಡು'='ಗುರುದ್ವಾರದೇಶ'** ಎಂಬ ಹೆಸರಿನಿಂದ ಪ್ರಸಿದ್ಧವಾಗಿದ್ದ ಯದುಗಿರಿಯ ಕಲ್ಯಾಣಿತೀರ್ಥ ಸರಸ್ಸಿನ ದಡದಲ್ಲಿರುವ ತಿರುನಾರಾಯಣಪುರದಲ್ಲಿ, ತಿರುನಾರಾಯಣಪ್ಪೆರುಮಾಳ್ ದೇವರ ಸನ್ನಿಧಿಗುಡಿಗೆ ದಕ್ಷಿಣ ಪಕ್ಕದಲ್ಲಿ ಆದಿಶೇಷ ಲಕ್ಷ್ಮಣ ಬಲರಾಮ ಮತ್ತು ನಂಬಿಗಳು ದಂಯಮಾಡಿಸಿರುವ **'ತಿರುಕ್ಕೋಟ್ಟಿಮಂಟಪ'** ಎಂಬ ಸ್ಥಾನ. ಸಮಯ ಒಂದು ದಿವ್ಯವಾದ ರಾತ್ರಿ. ಈ ಅರ್ಥಕ್ಕೆ ಸಂಗ್ರಹ ಶ್ಲೋಕ –

**'ಪಂಚಾಚಾರ್ಯಾಃ ಪಂಚವೋಪಾಯನಿಷ್ಠಾಃ,**
**ಪಂಚಾಚಾರ್ಯಂ ಪಾಂಚಗುಣ್ಯಾದಿಶಂಸ್ಯಂ ।**
**ವಿಷ್ಣೋಃಶ್ಶೇಷಂ ದರ್ಶಯನ್ತಂ ಸ್ವಪಾದೌ**
**ಮಂತ್ರಾಗಸ್ತ್ಯಂ ತತ್ತ್ವಮಾಪುಸ್ ತದುಕ್ತ್ಯಾ ॥'**

ಪಂಚಾಚಾರ್ಯರೊಡನೆ, ಕೂರತ್ತಾಳ್ವಾನ್ ಮತ್ತು ವಡುಹನಂಬಿಗಳೂ ಸೇರಿದರೆ ಇದಕ್ಕೆ ಸಪ್ತಋಷಿಗಳು. ಸೂತ್ರಗ್ರಂಥದಲ್ಲಿ ಉಲ್ಲೇಖವಾಗಿ ಬಂದಿರುವ ಇತರ ಅನೇಕ ಆಚಾರ್ಯರೂ ಶಿಷ್ಯರೂ ಚರಮಪರ್ವದಲ್ಲಿ ನಿಷ್ಠರೆಂದು ತಿಳಿದುಬರುತ್ತದೆ.

ಹೀಗೆ ಸಿಂಹಾಸನಾಧಿಪತಿಗಳಲ್ಲಿ ವಿಶೇಷವಾಗಿ ಕೆಲವು ಶಿಷ್ಟರಾದ ಆಚಾರ್ಯರು ಮಾತ್ರ ಇದನ್ನು ಪಡೆದು ಶಿಷ್ಯ–ಪ್ರಶಿಷ್ಯ–ಪರಂಪರೆಗಳಲ್ಲಿ ಪ್ರವರ್ತನ ಮಾಡಿದರು ಎಂದು ತಿಳಿಯಬರುವುದು.

ಇದಕ್ಕೆ ಭಕ್ತಿಯು ಪಕ್ವವಾಗಿರುವ ಪ್ರಪನ್ನರುಗಳಲ್ಲೂ, ಚರಮಪರ್ವನಿಷ್ಠರು ಮುಖ್ಯವಾಗಿ ಅರ್ಹ ಅಧಿಕಾರಿಗಳು, ಇವರಲ್ಲೂ ವಿಶ್ವಾಸ–ರುಚಿ–ಪ್ರಾಪ್ಯತ್ವರೆಗಳು ಯಾರಿಗೆ ಉಂಟಾಗಿರುವುದೋ ಅವರೇ ವಿಶೇಷಾಧಿಕಾರಿಗಳು ಅಂದರೆ ಅರ್ಹರು. ಭಗವಂತನ ಮಂತ್ರರಹಸ್ಯವೆನಿಸಿದ **'ರಹಸ್ಯತ್ರಯ'**ಕ್ಕೆ ಜ್ಞಾನಿಗಳಲ್ಲಿ ಅಗ್ರೇಸರರಾದವರೂ, ಪಕ್ವವಾದ ಭಕ್ತಿಯುಳ್ಳವರೂ, ಗಂಜೇಂದ್ರನಂತೆ ಇರುವವರೂ, ನಮ್ಮಾಳ್ವಾರಂತೆ ಇರುವವರೂ ಮೊದಲ ಅಧಿಕಾರಿಗಳಾದಂತೆಯೇ, ಇದಕ್ಕೆ ಅವರಲ್ಲಿ ಮುಖ್ಯರಾಗಿ ಚರಮಪರ್ವರಹಸ್ಯವನ್ನು ತಿರುವರಂಗಪ್ಪೆರುಮಾಳ್ ಅರೆಯರ್ ಎಂಬ ಆಚಾರ್ಯರಲ್ಲಿ ಹೋಗಿ ಸೇವೆಮಾಡಿ, ಅವರ ಉಪದೇಶದಿಂದ ಪಡೆದ ನಮ್ಮ ಭಗವದ್ರಾಮಾನುಚಾರ್ಯರಂತಹವರೇ ವಿಶೇಷಾಧಿಕಾರಿಗಳಾಗಿದ್ದರೂ;

**'ಅವರ ತಿರುವಡಿಸಂಬಂಧವೇ ಉತ್ತಾರಕ'** ಎಂದಿರುವವರೆಲ್ಲರಿಗೂ, ಗದ್ಯತ್ರಯದಲ್ಲಿ ಹೇಳಿರುವಂತೆ ಪ್ರಪತ್ತಿಯು ಹೇಗೆ ಸಿದ್ಧಿಸುವುದೋ; ಹಾಗೆಯೇ ಈ ಶ್ರೀರಾಮಾನುಜ ಪರಮರಹಸ್ಯತ್ರಯದಲ್ಲೂ ಅಧಿಕಾರವು ಸಿದ್ಧವಾಗಿದೆ. ಇದಿಷ್ಟೂ 27-4-2000 ದಿನಾಂಕದ ನನ್ನ ತಮಿಳು ಮುನ್ನುಡಿಯ ಅನುವಾದ ಎಂದು ವಿಜ್ಞಾಪನೆ. 16-9-2003.

## ರಾಮಾನುಜ ರಹಸ್ಯತ್ರಯದ ಪ್ರಕಾಶನ

ಈಗ ಶ್ರೀಮತಿ ವಿದುಷಿ ರಮಾಶ್ರೀನಿವಾಸನ್ ಕನ್ನಡಕ್ಕೆ ಈ ಸೂತ್ರಗಳನ್ನು ಅನುವಾದಿಸಿ ಈ ರಾಮಾನುಜರಹಸ್ಯತ್ರಯ ಸೂತ್ರಗ್ರಂಥವನ್ನು ಪ್ರಪ್ರಥಮವಾಗಿ ಕನ್ನಡಲಿಪಿಯಲ್ಲೇ ಮುದ್ರಿಸಿ ತನ್ನ **'ಶ್ರೀವೈಷ್ಣಶ್ರೀ'** - **'ಕೈಂಕರ್ಯ'** ಪ್ರಕಾಶನ ಎಂಬ ಸಂಸ್ಥೆಯಿಂದ ಪ್ರಕಟಪಡಿಸುತ್ತಿರುವುದು ಸರಿ. ನಮ್ಮ **'ವಿಶದವಾಕ್ ಪ್ರಕಾಶನ'**ದಲ್ಲಿ ಸಿದ್ಧವಾಗಿ ಇರುವ ಇದನ್ನು ಪ್ರಕಟಿಸಲು ಅನುಮತಿಸಿದ್ದೇನೆ. ಇದರ ಹಕ್ಕುಬಾಧ್ಯತೆಗಳೆಲ್ಲವೂ **'ವಿಶದವಾಕ್ ಪ್ರಕಾಶನ'** ಸಂಪಾದಕರದೇ ಆಗಿರುತ್ತದೆ. ತಮಿಳು ಮತ್ತು ದೇವನಾಗರಿ ಲಿಪಿಗಳಲ್ಲೂ ಪ್ರಕಟಿಸಲು ಉದ್ದೇಶ್ಯವಿದೆ.

ಈ ಗ್ರಂಥವನ್ನು ಓದಿ ಅರ್ಥಮಾಡಿಕೊಳ್ಳಲು ನಮ್ಮ ಟಿಪ್ಪಣಿ-ಅನುಬಂಧ-ವಿವರಣೆಗಳು ತಮಿಳು ಮಣಿಪ್ರವಾಳ ಭಾಷೆಯಲ್ಲಿ ಸುಮಾರು ಮುನ್ನೂರು ಪುಟಗಳಷ್ಟು ಇವೆ. ಭಗವದ್ ರಾಮಾನುಜರ ವೈಭವವನ್ನು ಸಾಕಷ್ಟು ಅನುಭವಿಸಬೇಕಾದರೆ ಅದೆಲ್ಲವೂ ಆವಶ್ಯಕ. ಪ್ರಕೃತ ಯಥೋಚಿತವಾಗಿ ಮುದ್ರಿತವಾಗುವ ಇದನ್ನು ರಾಮಾನುಜಭಕ್ತರೆಲ್ಲರೂ ಕೈಗೊಳ್ಳುವರೆಂದು ಆಶಿಸುತ್ತೇನೆ.

ಇಂತು ಸಜ್ಜನ ವಿಧೇಯ - ಸಂಪದಾಕ

ಅರೆಯರ್ ಶ್ರೀರಾಮಶರ್ಮಾ - ರಾಮಾನುಜದಾಸಾನುದಾಸ

ಸ್ವಭಾನುಸಂವತ್ಸರ ಆಶ್ವಯುಜ ಶುದ್ಧ ಸೂರ್ಯೋದಯ ಪ್ರಥಮೆ. ಯದಗಿರಿನಾಚ್ಚಿಯಾರಿಗೆ ನವರಾತ್ರಿ ಆರಂಭ.

ಹರಿಃ ಓಮ್

॥ ಅಟಿಹಿಯಮಣವಾಳಪ್ಪೆರುಮಾಳ್ ನಾಯನಾರ್ ತಿರುವಡಿಹಳೇ ಶರಣಮ್ ॥

# ॥ ಶ್ರೀರಾಮಾನುಜ-ರಹಸ್ಯತ್ರಯಸೂತ್ರಂ ॥

## (1) ತಿರುಮಂತ್ರಪ್ರಕರಣವ್

1. **ಓ**ದಿಯ ವೇದತ್ತಿನ್ ಉಪ್ಪೊರುಳ್ಳೈಕ್ಕಾಣಹಿಲ್ಲಾ ಉಲಹೋರ್‌ಹಳ್, ನಣ್ಣಟ್ ಞಾನಂ ತಲ್ಕೈಕ್ಕೊಳ್ಳ, ಕ್ಕಾರೇಯ್‌ಕ್ಕರುಣೈ ಇರಾಮಾನುಶನ್ ತನ್ ಪೆರುಂ ತೊಲ್ಲರಳ್ ಶೇರ್‌ನ್ದ್, ನಾನ್ಮಱೈಯಿನ್ ಶುಡರೊಳಿಯಾಲ್ ಇರುಳ್ಳೈತ್ತುರನ್ದ್, ಪೊರುಳ್ ಮುಡಿವಾನ ಶುರುಕ್ಕೈ, ಗುರು-ಶಿಷ್ಯೈಕ್ಯನಿದಾನಾತಪಸ್ಕಾದಿ ನಿಷೇಧತ್ತೈ ಆಕಾಶಲಿಖಿತವೂಕ್ಕಿ, ಪತ್ತಿಮಹಾಪಥಮಾಹ ವರುಮವಕ್ಕ್ ದುರ್ಗತಿ-ಸ್ವರ್ಗತಿಯಾಹ, ಸ್ವರಾಂಶಾದಿ ನಿರ್ಬಂಧಮುಱಿ, ಅಪ್ರಕಾಶ್ಯಪ್ರಕಾಶಮಾಹ, ಉಪದೇಶಿತ್ತದವ್ವುಂ, ಅಧಿಕೃತಾಧಿಕಾರಮಾಹೈಯಾಲೇ; ಚತುರಮಾನ ರಹಸ್ಯತ್ರಯತ್ತೈಯುಂ ಸ್ವಾಂಶಾದಿಯುಕ್ತ-ಪಾತ್ರತ್ರಯತ್ತಿಲೇ ಸೋಮಾನನ್ತ-ಪಾದತೀರ್ಥ-ಸರಸ್ತೀರಂಗಳಿಲೇ ಭೂತಾದಿ ಪ್ರಮೇಯಮಾಹ ಕಾಲತ್ರಯತ್ತಿಲ್ ಉಪದೇಶಿಕ್ಕೈಯಾಲೇ; ಇದುವೇ ಚರಮಪರ್ವಾಧಿಕಾರಿಕ್ಕಿ ಅವಶ್ಯಾಪೇಕ್ಷಿತಮ್. ॥1॥

2. **ನಾ**ಮಸಂಗ್ರಹಾಕಾರ-ಯೋಗ-ಪಾದುಕಾ-ಭಾವಂಗಳಿಲಿಱೀ ಸ್ವಾಂಶಾದಿಸೂಚನಮ್. ॥2॥

3. **ಮೋ**ಕ್ಷಸಂದೇಹಮುಂ, ಅಸಂಜಯ .......4......... ಆಕಾರಮುಂ, ಅಸಮಾಸಿ ನಿರ್ಬಂಧಮುಂ, ಅತ್ತದುಮ್ ಇಪ್‌ಪ್ರಮೇಯತ್ತಿಲ್ ಎನ್ಱ್ ಪುಳ್ಳಾನ್ ವಾರ್ತ್ತೈ. ॥3॥

4. **ರಾ**ಮದಿವಾಕರಾಚ್ಯುತಭಾನು-ವಕುಳಭೂಷಣಭಾಸ್ಕರೋದಯತ್ತಿಲ್ ಕ್ಷಯಿಯಾದ ಧ್ವಾಂತಕ್ಷಯಮುಂ, ವಿಕಸಿಯಾದ ಪುಣ್ಯಾಮ್ಭೋಜವಿಕಾಸಮುಂ, ರಾಮಾನುಜದಿವಾಕರೋದಯತ್ತಿಲ್ ಎನ್ಱ್ ಆಂಡಾನ್ ಪಣಿಕ್ಕುಮ್ ॥4॥

ಶ್ರೀಮತೇ ರಾಮಾನುಜಾಯ ನಮಃ

ಶ್ರೀಃ ॥ಹರಿಃ ಓಂ ॥

# ಶ್ರೀರಾಮಾನುಜರಹಸ್ಯತ್ರಯ ಸೂತ್ರಗಳು

## ಕನ್ನಡಾನುವಾದ

॥ ಅಳಹಿಯಮಣವಾಳಪ್ಪೆರುಮಾಳ್ನಾಯನಾರ ಸಿರಿಯಡಿಗಳೇ ಶರಣು ॥

## ತಿರುಮಂತ್ರ ಪ್ರಕರಣವು

1. ಓದಿದ ವೇದಗಳ ಅಂತರಾರ್ಥವನ್ನು ಅರಿಯಲಾಗದ ಈ ಲೋಕದವರು, ಯಥಾರ್ಥಜ್ಞಾನವನ್ನು ಪಡೆಯುವುದಕ್ಕಾಗಿ; ಕರುಣಾಸಾಗರರಾದ ಶ್ರೀರಾಮಾನುಜರು, ತಮ್ಮ ಮಹತ್ತರವಾದ ಅನುಗ್ರಹದಿಂದ, ನಾಲ್ಕುವೇದಗಳ ಪ್ರಕಾಶದಿಂದ ಕತ್ತಲೆಯನ್ನು ಕಳೆದು, ತತ್ತ್ವಪ್ರತಿಪಾದಕ ಸಾರಾರ್ಥವನ್ನು, ಗುರುಶಿಷ್ಯೈಕ್ಯನಿದಾನಾತಪಸ್ಸಾದಿ ನಿಷೇಧವನ್ನು ಆಕಾಶಲಿಖಿತವಾಗಿಸಿ, ಭಕ್ತಿಮಹಾಪಥದಲ್ಲಿ ಬರುವವರಿಗೆ ದುರ್ಗತಿ–ಸ್ವರ್ಗತಿಯಾಗಿ, ಸ್ವರಾಂಶಾದಿ ನಿರ್ಬಂಧವಿಲ್ಲದೆ ಅಪ್ರಾಕಾಶ್ಯ ಪ್ರಕಾಶಕವಾಗಿ, ಉಪದೇಶಿಸಿದುದೂ ಕೂಡ ಅಧಿಕೃತಾಧಿಕಾರವಾದುದರಿಂದ; ಚತುರವಾದ ರಹಸ್ಯತ್ರಯವನ್ನು ಸ್ವಾಂಶಾದಿಯುಕ್ತ–ಪಾತ್ರತ್ರಯದಲ್ಲಿ–ಸೋಮಾನಂತ–ಪಾದತೀರ್ಥ–ಸರಸ್ ತೀರಗಳಲ್ಲಿ ಭೂತಾದಿ ಪ್ರಮೇಯವಾಗಿ ಕಾಲತ್ರಯದಲ್ಲಿ ಉಪದೇಶಿಸಿರುವುದರಿಂದ ಇದೇ ಚರಮಪರ್ವಾಧಿಕಾರಿಗೆ ಅವಶ್ಯಾಪೇಕ್ಷಿತವಾಗಿದೆ. ॥1॥

2. ನಾಮ ಸಂಗ್ರಹಕಾರ–ಯೋಗ–ಪಾದುಕಾ–ಭಾವಗಳಲ್ಲಲ್ಲವೆ! ಸ್ವಾಂಶಾದಿ ಸೂಚನೆ. ॥2॥

3. ಮೋಕ್ಷಸಂದೇಹವೂ, ಅಸಂಜಯ__4__ಆಕಾರವೂ, ಅಸಮಾಸಿ ನಿರ್ಬಂಧವೂ ಕಳೆದದ್ದು ಈ ಪ್ರಮೇಯದಲ್ಲಿ ಎಂದು ಪುಳ್ಳಾನ್ ವಾರ್ತೆ. ॥3॥

4. ರಾಮದಿವಾಕರ–ಅಚ್ಯುತಭಾನು–ವಕುಳಭೂಷಣಭಾಸ್ಕರೋದಯದಲ್ಲಿ ಕ್ಷಯಿಸದ ಧ್ವಾಂತ ಕ್ಷಯವೂ, ವಿಕಸಿಸದ ಪುಣ್ಯಾಂಭೋಜವಿಕಾಸವೂ, ರಾಮಾನುಜ ದಿವಾಕರೋದಯದಲ್ಲಿ ಎಂಬುದಾಗಿ ಆಂಡಾನ್ ಹೇಳುವರು. ॥4॥

5. **ಮಾ**ನುಷಾದಿ-ಮೂರ್ತ್ತಿಚತುಷ್ಟಯಮುಂ, ಎದಿರ್ತ್ತವ್ಯೈತ್ತಡಿಯಾನ ವಸ್ತುವಿಭಾಗಂ ಎನ್ಱು ವಡುನಮ್ಬಿ ಅರುಳಿಚ್ಚೈಯ್‌ದಾರಿಱೇ. ॥5॥

6. **ಅ**ನುಗ್ರಹನಿರತತ್ವಗೋಚರ-ಪರಿಕರಘೋಷ-ಸರ್ವಶೇಷಿಶೇಷತ್ವ-ವಿಗ್ರಹ-ಸ್ವಭಾವಾದಿಹಳ್ ವಿಶೇಷ ವ್ಯವಸ್ಥಾಪಂಕಂಗಳ್ ಎನ್ಱು ಜೀಯರ್ ಅರುಳಿಚ್ಚೈಯ್‌ವರಾಮ್. ॥6॥

7. **ಜಾ**ತಿವೃತ್ತಾದಿ ನಿಯಮಮತ್ತ ಗಾಯತ್ರೀ-ಗಾನ-ಸಾರ-ಸಂಗ್ರಹ-ಪ್ರಪದನ-ಪ್ರವರ್ತಕರ್‌ಹಳಿಱೇ ಇದುಕ್ಕು ಪೂರ್ಣಾಧಿಕಾರಿಹಳ್. ॥7॥

8. **ಆ**ಯಾಸಾನರ್ಥಾಹಂಕಾರಾವದ್ಯಾದಿ-ಬಹುಳಮೆಲ್ಲಾಂ ತನ್ನಿಲೊಕ್ಕುಂ ಎನ್ನುಱಿನ್ದಾಲ್, ಇತ್ತೈಯಂಗೊಟಿಯುತ್ತಿಱ್ಱುವಿಲ್ಲೈಯಂಗೊನ್ಱು ಅಸ್ಮದಾಚಾರ್ಯೋಕ್ತಮ್ ॥8॥

॥ ಅಟಿಹಿಯಮಣವಾಳಪ್ಪೆರುಮಾಳ್ ನಾಯನಾರ್ ತಿರುವಡಿಹಳೇ ಶರಣಮ್ ॥

## (2) ದ್ವಯ-ಪೂರ್ವಖಣ್ಡಪ್ರಕರಣಮ್

॥ ಅಟಿಹಿಯಮಣವಾಳಪ್ಪೆರುಮಾಳ್ ನಾಯನಾರ್ ತಿರುವಡಿಹಳೇ ಶರಣಮ್ ॥

9 **ಶ್ರಿ**ಯಃ ಪತಿತ್ವಾದಿ ಚತುಷ್ಟಯಮುಂ, ಅಸ್ಮದ್ಗುರು-ಜಗದ್ಗುರು ಶಬ್ದಂಗಳಿಲುಂ, ವ್ಯೂಹಭೇದ-ಪಾರಿತೋಷಿಕಂಗಳಿಲುಂ ಸ್ಪಷ್ಟಮಾಮ್. ॥1॥

10. **ಮ**ಧ್ಯಮಾಕ್ಷರಾರ್ಥಂ ಜಯದೇವೋಪಾಖ್ಯಾನಸಿದ್ಧಮಿಱೇ ॥2॥

11. **ರಾ**ಜಸಂಬಂಧಿ ಪುರಸ್ಕಾರವತ್ ಇತರ ಸಮಾಶ್ರಯಣಂ ಎನ್ಗೈ ಗಾಯತ್ರೀ ಪ್ರಥಮಭಾಗ ಸಿದ್ಧಮಾಮ್. ॥3॥

5. **ಮಾ**ನುಷಾದಿ ಮೂರ್ತಿ ಚತುಷ್ಟಯವೂ, ಎದುರಿಸಿ ಹೊಂದಿಸಲು ಮೂಲವಾದ ವಸ್ತುವಿಭಾಗವು ಎಂದು ವಡುಹನಂಬಿ ಅನುಗ್ರಹಿಸಿರುವರು. ॥5॥

6. **ಅ**ನುಗ್ರಹ ನಿರತತ್ವಗೋಚರ-ಪರಿಕರ ಘೋಷ-ಸರ್ವಶೇಷಿಶೇಷತ್ವ-ವಿಗ್ರಹ-ಸ್ವಭಾವಾದಿಗಳು, ವಿಶೇಷ ವ್ಯವಸ್ಥಾಪಕಗಳು ಎಂದು ಜೀಯರ್ ಅನುಗ್ರಹಿಸುತ್ತಿದ್ದರಂತೆ. ॥6॥

7. **ಜಾ**ತಿವೃತ್ತಾದಿ ನಿಯಮವಿಲ್ಲದ ಗಾಯತ್ರೀ-ಗಾನ-ಸಾರ-ಸಂಗ್ರಹ ಪ್ರಪದನ-ಪ್ರವರ್ತಕರೇ ಅಲ್ಲವೆ ಇದಕ್ಕೆ ಪೂರ್ಣಾಧಿಕಾರಿಗಳು. ॥7॥

8. **ಆ**ಯಾಸಾನರ್ಥಾಹಂಕಾರಾವದ್ಯಾದಿ-ಬಹುಳವೆಲ್ಲಾ ತನ್ನಲ್ಲಿದೆ ಎಂದು ಅರಿತರೆ ಇದರ ಹೊರತಾಗಿ ಉಪಾದೇಯವಾದದ್ದು ಬೇರಾವುದೂ ಇಲ್ಲ ಎಂಬುದು ಅಸ್ಮದಾಚಾರ್ಯದಿಂದ ಹೇಳಲ್ಪಟ್ಟಿದೆ. ॥8॥

॥ ಅಳಹಿಯಮಣವಾಳಪ್ಪೆರುಮಾಳ್ನಾಯನಾರ ಸಿರಿಯಡಿಗಳೇ ಶರಣು ॥

## (2) ದ್ವಯ-ಪೂರ್ವಖಂಡ ಪ್ರಕರಣವು

॥ ಅಳಹಿಯಮಣವಾಳಪ್ಪೆರುಮಾಳ್ನಾಯನಾರ ಸಿರಿಯಡಿಗಳೇ ಶರಣು ॥

9. **ಶ್ರಿ**ಯಃಪತಿತ್ವಾದಿ ಚತುಷ್ಟಯವೂ, ಅಸ್ಮದ್ಗುರು-ಜಗದ್ಗುರು ಶಬ್ದಗಳಲ್ಲೂ, ವ್ಯೂಹಭೇದ ಪಾರಿತೋಷಕಗಳಲ್ಲೂ ಸ್ಪಷ್ಟವಾಗುವುದು. ॥1॥

10. **ಮ**ಧ್ಯಮಾಕ್ಷರದ ಅರ್ಥವು ಜಯದೇವೋಪಾಖ್ಯಾನದಲ್ಲಿ ಸಿದ್ಧವಲ್ಲವೆ. ॥2॥

11. **ರಾ**ಜಸಂಬಂಧಿ ಪುರಸ್ಕಾರದಂತೆ ಇತರ ಸಮಾಶ್ರಯಣವೆಂಬುದು ಗಾಯತ್ರೀ ಪ್ರಥಮಭಾಗಸಿದ್ಧವಾದುದು. ॥3॥

12. ಮಾದೃಶ-ರಕ್ಷಣ-ಕ್ಷಮಾವಬೋಧನ-ಸಮಾಗಮಾನನ್ದಂಗಳ್ಕೈ ಚ್ಚೊಲ್ಲುಮಿಡತ್ತಿಲ್, ಅತೋಽನ್ಯದಜ್ಞಾನಕಾದಾಚಿತ್ಕಂಗಳಾಮಿಱೀ.॥4॥

13. ಅನುಜನ್ಮಭಾವ-ಪ್ರಲಮ್ಬವಧ-ಸ್ತುತಿಸೋಪಾನಾರ್ಚನ-ಜಾಮೂತ್ರ್ಯ-ಬಾಲ-ದಾಸ-ದಾಸೀ-ಸ್ನುಷಾಽಪತ್ಯ-ಸ್ವಸೃ-ಭಾವಾದಿಹಳಾಲೇ ಶೇಷಿಮಿಥುನಮುಂ ಶೇಷತ್ವಪ್ರತಿಸಮ್ಬನ್ಧಿಯಾಮಿಱೀ. ॥5॥

14. ಜಲಲಿಖಿತ-ಜಗದಾತ್ಮಭಾವ-ಜೀನನಮುಂ, ಆತ್ಮಗುಣ ಭೀತಿಯುಂ ಕಣ್ಡಾಲ್; ನಿಪ್ಾತ ಶಕ್ತಿಕ್ಕಿ ವಿಶೇಷಣಾಂಶತ್ತಿಲ್ ತಲ್ಯೈಯಿಡವೊಣ್ಣಾದಿಱೀ. ॥6॥

15. ಚತುರ್ವಿಧ-ಕೋಸಲ-ಚಣ್ಡಾದ್ಯಮರ-ಗೋಚರ-ನಿನೀಷಾ-ದ್ವಯ-ಸಾಧಾರಣ-ಸ್ವಾಚ್ಛಂದ್ಯಮಾಯಾ-ಯೋಗ-ನಿಯೋಗ-ಸಾಮ್ರಾಜ್ಯ-ಮೂಲಕ-ಸಂಶಯಾಹರ್ೋಪಾಯತ್ವಂ, ಉದಙ್ಕಪ್ರಶ್ನಾದಿಹಳಿಲ್ ಆಕ್ಷಿಪ್ತಮಾನಪಡಿ ಕಣ್ಡಾಲ್, ಸರ್ವಲೋಕೋದ್ಧರ್ತಾವೈಯುನ್ನಿ, ಮಪ್ರಾಧಾನ್ಯಂ ಅನನ್ಯಗತಿಕಮಿಱೀ. ॥7॥

16. ರಘುಕುಲತಿಲಕೋಲ್ಲಾಸಕ-ನಿತ್ಯಶತ್ರುಘ್ನವೃತ್ತಿ-ಅಹಂಸರ್ವತ್ತ್ಯೈಯುಂ ಕೂಡ ಅಘಮೆನಾಪ್ಪಣ್ಣುಮಿಱೀ. ॥8॥

17. ಚರಣೌನ್ನತ್ಯ-ವಿಷ್ಣೋರ್ಭಾಗಾವೃತ್ತ್ಯಾನುಪ್ರವೇಶನಾದಿಹಳ್ಕೈಕಣ್ಣ ಪುರತ್ತಾರ್ಯೈಯುರ್ ಪರಕ್ಕ ಉಱೈಕ್ಕುಮಿಡಂ ಕೊಣ್ಡು ಅಱಿಯಲಾಮ್ ॥9॥

18. ಶಯ್ಯಾಸನಾನುಭಾವ-ಸಹೋದರ-ಭ್ರಾತೃತ್ವಂಗಳ್ಕೈ ಉಡ್ಯೈಯ ಇವರ್ಕ್ಕ ನಾರಾಯಣತ್ವಮುಂ ಅಸಂಕುಚಿತಮಿಱೀ. ॥10॥

12. **ಮಾ**ದೃಶ-ರಕ್ಷಣ ಕ್ಷಮಾವಭೋಧನ-ಸಮಾಗಮಾನಂದಗಳನ್ನು ಹೇಳುವೆಡೆಗಳಲ್ಲಿ ಅತೋಽನ್ಯದಜ್ಞಾನ-ಕಾದಾಚಿತ್ಕಗಳಾಗುವುವಲ್ಲವೆ. ॥4॥

13. **ಅ**ನುಜನ್ಮಭಾವ-ಪ್ರಲಂಬವರ್ಧ-ಸ್ತುತಿಸೋಪಾನಾರ್ಚನ-ಜಾಮಾತೃ-ಬಾಲ-ದಾಸ-ದಾಸೀ-ಸ್ನುಷಾಽಪತ್ಯ-ಸ್ವಸೃ-ಭಾವಾದಿಗಳಿಂದ-ಶೇಷಿ ಮಿಥುನವೂ ಶೇಷತ್ವ ಪ್ರತಿಸಂಬಂಧಿಯಾಗಿರುವುದಲ್ಲವೆ. ॥5॥

14. **ಜ**ಲಲಿಖಿತ-ಜಗದಾತ್ಮಭಾವ-ಜೀವನವೂ, ಆತ್ಮಗುಣಭೀತಿಯೂ ಕಂಡರೆ, ನಿಪಾತಶಕ್ತಿಗೆ ವಿಶೇಷಾಣಾಂಶದಲ್ಲಿ ತಲೆಯಿಡಲು ಸಾಧ್ಯವಿಲ್ಲವಲ್ಲ! ॥6॥

15. **ಚ**ತುರ್ವಿಧ-ಕೋಸಲ-ಚಂಡಾದ್ಯಮರ-ಗೋಚರ-ನಿನೀಷಾ-ದ್ವಯ-ಸಾಧಾರಣ-ಸ್ವಾಚ್ಛಂದ್ಯ-ಮಾಯಾ-ಯೋಗ-ನಿಯೋಗ-ಸಾಮ್ರಾಜ್ಯ-ಮೂಲಕ-ಸಂಶಯಾಹೋರ್ಽಪಾಯತ್ವವು-ಉದಂಕಪ್ರಶ್ನಾದಿಗಳಲ್ಲಿ ಆಕ್ಷೇಪಗೊಂಡಿರುವುದನ್ನು ಕಂಡರೆ; ಸರ್ವಲೋಕೋದ್ಧರ್ತಾವಲ್ಲದೆ ಮಕಾರಾರ್ಥಪ್ರಾಧಾನ್ಯವು ಅನನ್ಯಗತಿಕವಲ್ಲವೆ. ॥7॥

16. **ರ**ಘುಕುಲತಿಲಕೋಲ್ಲಾಸಕ-ನಿತ್ಯಶತ್ರುಘ್ನವೃತ್ತಿ-ಅಹಂಸರ್ವವನ್ನೂ ಕೂಡ ಅಘವೆಂದಾಗಿಸುತ್ತದಲ್ಲವೆ. ॥8॥

17. **ಚ**ರಣೌನ್ನತ್ಯ-ವಿಷ್ಣೋರ್ಭಾಗಾವೃತ್ತ್ಯಾನುಪ್ರವೇಶನಾದಿಗಳನ್ನು-ತಿರುಕಣ್ಣಪುರದ ಅರೆಯರ್ ವಿಸ್ತಾರವಾಗಿ ನಿರೂಪಿಸಿರುವಲ್ಲಿ ಅರಿಯಬಹುದು. ॥9॥

18. **ಶ**ಯ್ಯಾಸನಾನುಭಾವ-ಸಹೋದರ-ಭ್ರಾತೃತ್ವಗಳನ್ನು ಉಳ್ಳ ಇವರಿಗೆ ನಾರಾಯಣತ್ವವೂ ಅಸಂಕುಚಿತವಲ್ಲವೆ. ॥10॥

19. ರಕ್ಷಕತ್ವ-ಶೇಷಿತ್ವಂಗಳ್ ನಿಲ್ಲೈನಿನ್ಱವಿಡತ್ತಿಲ್ ವ್ಯತ್ತಿಯಿಱಿಕ್ಕೇ ಪ್ರಾಪ್ಯಮಾಹಿಱದು. ॥11॥

20. ಶರಣಮುಂ ವರಣೀಯಮುಂ ಶೇರ್ನ್ದಿರುಪ್ಪದು ಏಕೀಭಾವತ್ತಿಲಿಱಿಕ್ಕೇ. ॥12॥

21. ಪ್ರಪದ್ಯೇ ಎನ್ಱದುಂ ಆನುಗ್ರಹಾರ್ಥವಾಂಯ್ 'ಕಲಿಯುಂ ಕೆಡುಂ', 'ಆಮುದಲ್ವನ್', 'ಕಶ್ಚಿದ್ ಭವಿಷ್ಯತಿ'ಯಾನ ದಿವ್ಯಪ್ರಪಂಧಾಚಾರ್ಯ ಮುನಿವಚನ ಪ್ರಯೋಗಂ. ॥13॥

22. ಪ್ರಪದನ ಫಲಮುಂ ಕಣ್ಡದು ಶಬರಿಯಿಲ್ ಪೋಲೇ ಪಾದಮೂಲತ್ತಿಲೆನ್ಱು ವಡುಹನಮ್ಬಿವಾರ್ತ್ತೈ. ॥14॥

23. ಪ್ರಪದ್ಯೇ ಎನ್ಗಿಱ ಇದಿಲುಣ್ಡಾನ ಪರ್ವತ್ರಯಪ್ರಾಧಾನ್ಯಮುಂ, ಕಲಿಯುಂ ಕೆಡನಿಲ್ ಕಣ್ಡದುವೇ ಆಯ್ತ್ತು ಪ್ಪಯಿಲುಂ-ನೆಡುಮಾಱ್ಕಳಿಲುಮೇ ಎನ್ಱು ಪಿಳ್ಳೈ ಅರುಳಿಚ್ಚೆಯ್ವರ್. ॥15॥

॥ ಅೞಹಿಯಮಣವಾಳಪ್ಪೆರುಮಾಳ್ ನಾಯನಾರ್ ತಿರುವಡಿಹಳೇ ಶರಣಮ್ ॥

# (3) ದ್ವಯೋತ್ತರ ಖಂಡ ಪ್ರಕರಣವ್

॥ ಅೞಹಿಯಮಣವಾಳಪ್ಪೆರುಮಾಳ್ ನಾಯನಾರ್ ತಿರುವಡಿಹಳೇ ಶರಣಮ್ ॥

24. ಶ್ರೀಮತ್ ಎನ್ಗಿಱ ಶ್ರೀಯಾನದು ಚತುಸ್ಸಸ್ತ್ರತಿ-ಸಿಂಹಾಸನಾಧಿಪತ್ಯ-ಸ್ಥಾಪನ-ಪ್ರಪತ್ತಿ-ರಹಸ್ಯ-ಸಾಮ್ರಾಜ್ಯ-ವೇಷತ್ತೈಚ್ಚೊಲ್ಲುಹಿಱದೆನ್ಱು ನಡಾದೂರಾೞ್ವಾನ್ ಪಣಿಕ್ಕುಮ್. ॥1॥

25. ಮತುಪ್ಪಾಲೇ ನಿತ್ಯ-ವಿಶಿಷ್ಟ-ವೇಷತ್ತೈಯೋ ನಿತ್ಯಮಾಹಕೊಣ್ಡು ನಡನ್ದಪಡಿ ಶ್ರೀರಾಮಾನುಜ ಪಾದುಕಾ-ಸಂಬಂಧ-ನಿಬಂಧನಮಾನ-ಸರ್ವಸ್ವ-ಸ್ವಾಮಿತ್ವಂ ವಿಶೇಷ್ಯತ್ತಿಲೇ ನಿನ್ಱದ್. ॥2॥

19. ರಕ್ಷಕತ್ವ–ಶೇಷಿತ್ವಗಳು ನೆಲೆಯಾಗಿರುವೆಡೆಯಲ್ಲಿನ ವೃತ್ತಿಯೇ ಅಲ್ಲವೆ ಪ್ರಾಪ್ಯವಾಗುವುದು. ||11||

20. ಶರಣವೂ ವರಣೀಯವೂ ಸೇರಿ ಇರುವುದೂ ಏಕೀಭಾವದಲ್ಲಲ್ಲವೇ. ||12||

21. ಪ್ರಪದ್ಯೇ ಎಂಬುದೂ ಅನುಗ್ರಹಾರ್ಥವಾಗಿ, 'ಕಲಿಯುಂ ಕೆಡುಂ', 'ಆಮುದಲ್ವನ್', 'ಕಶ್ಚಿದ್ ಭವಿಷ್ಯತಿ' ಎಂಬ ಪ್ರಬಂಧಾಚಾರ್ಯ ಮುನಿ ವಚನ ಪ್ರಯೋಗವು. ||13||

22. ಪ್ರಪದನ ಫಲವೂ ಕಂಡುಬರುವುದು ಶಬರಿಯಂತೆ ಪಾದಮೂಲದಲ್ಲಿ ಎಂಬುದು ವಡುಹನಂಬಿಯ ವಾರ್ತೆ. ||14||

23. ಪ್ರಪದ್ಯೇ ಎಂಬ ಇದರಲ್ಲಿ ಉಂಟಾದ ಪರ್ವತ್ರಯ ಪ್ರಾಧಾನ್ಯವೂ, 'ಕಲಿಯುಂ ಕೆಡುಂ' ನಲ್ಲಿ ಕಂಡದುದೇ ಆಯಿತು ಪಯಿಲುಂ ನೆಡುಮಾಲ್ಕ್ ಗಳಲ್ಲೂ ಎಂಬುದಾಗಿ ಪಿಳ್ಳೈ ಅನುಗ್ರಹಿಸುತ್ತಾರೆ. ||15||

